# ಚತುರ್ಧಾಮ ಯಾತ್ರೆ

**ಜಿ.ವಿ. ಹೆಗಡೆ**

ಸಾಂಪ್ರದಾಯಿಕವಾಗಿ ಚತುರ್ಧಾಮವೆಂದರೆ ಪುರಿ, ರಾಮೇಶ್ವರ, ದ್ವಾರಕೆ ಮತ್ತು ಬದರಿ ಈ ನಾಲ್ಕು ತೀರ್ಥಕ್ಷೇತ್ರಗಳಾಗಿವೆ. ಆದರೆ ಈಚೆಗೆ ಚಾರ್‌ಧಾಮ್ ಯಾತ್ರೆ ಹೆಚ್ಚು ಜನಪ್ರಿಯವಾಗಿರುವುದರಿಂದ ಈ ಧಾಮಗಳ ಬಗ್ಗೆ ಅನೇಕರಿಗೆ ತಿಳಿದಿಲ್ಲ. ಈ ಪವಿತ್ರ ಧಾಮಗಳ ದರ್ಶನ ಪುಣ್ಯಕರವೆಂದು ತುಂಬ ಪ್ರಾಚೀನ ಕಾಲದಿಂದಲೂ ನಂಬಲಾಗಿತ್ತು. ಈ ಕುರಿತು ಬರೆದಿರುವ ಲೇಖಕರು ಮೈಸೂರು ಆಶ್ರಮದ ಭಕ್ತರು. ಕೆನರಾ ಬ್ಯಾಂಕಿನ ನಿವೃತ್ತ ಅಧಿಕಾರಿಗಳಾಗಿದ್ದ ಅವರು ಹಲವು ಯಾತ್ರೆಗಳನ್ನು ಮಾಡಿದ್ದಾರೆ.

‘‘ಪ್ರಪಂಚದಲ್ಲಿ ಯಾವುದಾದರೊಂದು ದೇಶವು ಪುಣ್ಯಭೂಮಿ ಎಂದು ಕರೆದುಕೊಳ್ಳಲು ಅರ್ಹವಾಗಿದ್ದರೆ, ಜೀವಿಗಳು ತಮ್ಮ ಕರ್ಮವನ್ನು ಸವೆಸಲು ಕೊಟ್ಟಕೊನೆಯದಾಗಿ ಬರಬೇಕಾದ ಸ್ಥಳವೊಂದಿದ್ದರೆ, ಭಗವಂತನೆಡೆಗೆ ಸಾಗುತ್ತಿರುವ ಪ್ರತಿಯೊಂದು ಜೀವಿಯೂ ತನ್ನ ಕೊನೆಯ ಯಾತ್ರೆಯನ್ನು ಪೂರೈಸಲು ಬರಬೇಕಾದ ಕರ್ಮಭೂಮಿಯೊಂದಿದ್ದರೆ, ಮಾನವನು ಮಾಧುರ್ಯ-ಔದಾರ್ಯ, ಪವಿತ್ರತೆ-ಶಾಂತಿ — ಇವುಗಳಲ್ಲಿ, ಎಲ್ಲಕ್ಕಿಂತ ಮಿಗಿಲಾಗಿ ಧ್ಯಾನದಲ್ಲಿ ಹಾಗೂ ಅಂತರ್ಮುಖತೆಯಲ್ಲಿ, ಪರಾಕಾಷ್ಠೆಯನ್ನು ಮುಟ್ಟಿದ ರಾಷ್ಟ್ರವೊಂದಿದ್ದರೆ, — ಅದು ಈ ಭರತಖಂಡವೇ.’’

— ಸ್ವಾಮಿ ವಿವೇಕಾನಂದ

*(೧೮೯೭ ಜನವರಿ ೧೬ – ಕೊಲಂಬೋದ ‘ಫ್ಲೋರಲ್ ಹಾಲ್’)*

ನಮ್ಮ ಭಾರತವೊಂದು ಪವಿತ್ರ ಪುಣ್ಯಭೂಮಿ - ಕರ್ಮಭೂಮಿ. ಸ್ವಯಂ ಭಗವಂತನೇ ಧರೆಗೆ ಅವತರಿಸಲು ಆರಿಸಿಕೊಂಡ ಪುಣ್ಯಕ್ಷೇತ್ರವಿದು. ಇದರ ಕಣಕಣವೂ ಪವಿತ್ರ. ದೇಶದ ಉದ್ದಗಲಕ್ಕೂ ಅಸಂಖ್ಯ ತೀರ್ಥಕ್ಷೇತ್ರಗಳಿವೆ, ಇಲ್ಲಿ. ಇವೆಲ್ಲವೂ ಸಹಸ್ರಸಹಸ್ರ ವರ್ಷಗಳಿಂದ ಸಮಸ್ತ ಭಾರತೀಯರನ್ನು ಆಸೇತು ಹಿಮಾಚಲ ಪರ್ಯಂತ ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ, ಪ್ರಾಂತ್ಯ - ಭಾಷೆಗಳ ಎಲ್ಲೆಯನ್ನು ಮೀರಿ, ಏಕತೆಯ ಸೂತ್ರದಲ್ಲಿ ಬಂಧಿಸಿರುವ ಅಪೂರ್ವ ಶ್ರದ್ಧಾಕೇಂದ್ರಗಳು. ಯಾವುದೇ ಸೌಕರ್ಯ, ಸೌಲಭ್ಯಗಳಿಲ್ಲದ ಕಾಲದಲ್ಲೂ, ಬರೀ ಕಾಲುನಡಿಗೆಯಲ್ಲೇ ಕಾಶೀಯಾತ್ರೆ ಪೂರೈಸುತ್ತಿದ್ದ ನಮ್ಮ ಹಿರಿಯರ ಬಗ್ಗೆ ನಾವು ಕೇಳಿದ್ದೇವೆ. ಜೀವಮಾನದಲ್ಲಿ ಒಮ್ಮೆಯಾದರೂ ಕಾಶಿ-ರಾಮೇಶ್ವರ ಯಾತ್ರೆ ಮಾಡಬೇಕೆಂಬುದು ಒಂದು ಜನಪ್ರಿಯ ಸಂಪ್ರದಾಯ. ಹೀಗೆ ತೀರ್ಥಯಾತ್ರೆ ಭಾರತೀಯರ ಜೀವನದ ಒಂದು ಅವಿಭಾಜ್ಯ ಅಂಗ, ಒಂದು ಪ್ರಮುಖ ಆಧ್ಯಾತ್ಮಿಕ ಚಟುವಟಿಕೆ.

ನಮ್ಮಲ್ಲಿ ಧಾರ್ಮಿಕ ಶ್ರದ್ಧಾ ಕೇಂದ್ರಗಳಾಗಿ ಪ್ರಸಿದ್ಧವಾಗಿರುವ ಕ್ಷೇತ್ರಗಳು ಅಸಂಖ್ಯಾತ! ದೇಶದ ಉದ್ದಗಲಕ್ಕೂ ಹರಡಿರುವ ಇವುಗಳು ಆಧ್ಯಾತ್ಮಿಕ ಚೈತನ್ಯವನ್ನು ಸಹಸ್ರಾರು ವರ್ಷಗಳಿಂದಲೂ ಪಸರಿಸುತ್ತ ನಾಡಿನ ಜನರನ್ನು ತಮ್ಮೆಡೆಗೆ ಆಕರ್ಷಿಸುತ್ತಿವೆ. ದ್ವಾದಶ ಜ್ಯೋತಿರ್ಲಿಂಗಗಳು, ೫೧ ಶಕ್ತಿ ಪೀಠಗಳು, ಅಷ್ಟ ವಿನಾಯಕ ದೇವಳಗಳು, ಸಪ್ತ ಮೋಕ್ಷದಾಯಕ ಪುರಿಗಳು, ಪಂಚ ಪ್ರಯಾಗಗಳು, ಪಂಚ ದ್ವಾರಕೆಗಳು — ಹೀಗೆ ಪೌರಾಣಿಕ, ಐತಿಹಾಸಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ, ಧಾರ್ಮಿಕ ಹಿನ್ನೆಲೆಯ ನೂರಾರು ಕ್ಷೇತ್ರಗಳು ಕೈಲಾಸದಿಂದ ಕನ್ಯಾಕುಮಾರಿಯವರೆಗೂ, ಪಶ್ಚಿಮದ ಸಿಂಧೂ ಸಾಗರದಿಂದ ಪೂರ್ವದ ಗಂಗಾಸಾಗರದವರೆಗೂ ವ್ಯಾಪಿಸಿದ್ದು, ಪ್ರತಿಯೊಂದೂ ತನ್ನದೇ ವೈಶಿಷ್ಟ್ಯವನ್ನೂ ಮಹತ್ವವನ್ನೂ ಹೊಂದಿದೆ. ಇವುಗಳಲ್ಲಿ ಪುರಾಣ ಪ್ರಸಿದ್ಧ ನಾಲ್ಕು ಪುಣ್ಯಕ್ಷೇತ್ರಗಳೇ ಚತುರ್ಧಾಮಗಳು.

ದೇಶದ ನಾಲ್ಕು ಮೂಲೆಗಳಲ್ಲಿ ವಿರಾಜಿಸುತ್ತಿವೆ ಈ ಪುಣ್ಯಕ್ಷೇತ್ರಗಳು! ಪೂರ್ವದಲ್ಲಿ **ಜಗನ್ನಾಥ ಪುರಿ**, ದಕ್ಷಿಣದಲ್ಲಿ **ರಾಮೇಶ್ವರಂ**, ಪಶ್ಚಿಮದಲ್ಲಿ **ದ್ವಾರಕಾ** ಹಾಗೂ ಉತ್ತರದಲ್ಲಿ **ಬದರೀನಾಥ** — ಇವೇ ಈ ನಾಲ್ಕು ಪುಣ್ಯಧಾಮಗಳು. ಇವು ನಾಲ್ಕೂ, ದೇಶದ ಗಡಿಪ್ರದೇಶದಲ್ಲೇ ಇರುವುದು ಒಂದು ವಿಶೇಷ. ಮೂರು ಕ್ಷೇತ್ರಗಳು ಸಮುದ್ರತೀರದಲ್ಲಿದ್ದರೆ, ಒಂದು ಹಿಮಾಲಯದಲ್ಲಿ. ಎಲ್ಲ ಕಡೆಯ ಭಾಷೆ, ವೇಷ ಭೂಷಣ, ಆಹಾರ ಪದ್ಧತಿಗಳೆಲ್ಲ ಬೇರೆ ಬೇರೆ. ಪ್ರತಿಯೊಂದು ಕ್ಷೇತ್ರದ ಅಂತರವೂ ಸಾವಿರಾರು ಕಿಲೋಮೀಟರ್. ಆದರೂ ಎಲ್ಲ ಹೃದಯಗಳ ಆಧ್ಯಾತ್ಮಿಕ ತುಡಿತ, ಲಕ್ಷ್ಯ ಒಂದೇ. ಶತಶತಮಾನಗಳಿಂದ ನಿರಂತರವಾಗಿ ತೀರ್ಥಯಾತ್ರಿಗಳ ಪ್ರವಾಹ ಇಲ್ಲಿಗೆ ಹರಿಯುತ್ತಲೇ ಇದೆ. ಬನ್ನಿ! ಇಂತಹ ಪುಣ್ಯಪ್ರದ ಚತುರ್ಧಾಮಗಳಲ್ಲೆಲ್ಲ, ಬೇರೆ ಬೇರೆ ನಾಮ-ರೂಪಗಳಿಂದ ವಿರಾಜಮಾನನಾಗಿರುವ ಆ ಪರಮಪುರುಷನ ಸನ್ನಿಧಿಗಳನ್ನೊಮ್ಮೆ ದರ್ಶಿಸಿ ಬರೋಣ! ಪ್ರಾರಂಭ ಮಾಡೋಣ, ಪೂರ್ವದ ಜಗನ್ನಾಥಪುರಿಯಿಂದ.

## ಜಗನ್ನಾಥ ಪುರಿ

ಪುರಿ ಎಂದು ಪ್ರಸಿದ್ಧವಾಗಿರುವ ಈ ನಗರ ಇರುವುದು ಭಾರತದ ಪೂರ್ವ ಕರಾವಳಿಯ, ಒರಿಸ್ಸಾ ರಾಜ್ಯದ ರಾಜಧಾನಿ ಭುವನೇಶ್ವರದಿಂದ ೬೦ ಕಿ.ಮೀ. ದೂರದಲ್ಲಿ. ಇಲ್ಲಿಯ ಜಗನ್ನಾಥ ಕ್ಷೇತ್ರದಿಂದಲೇ ಇದಕ್ಕೆ ಮಹತ್ವ.

ಇದೊಂದು ಅತಿ ಪ್ರಾಚೀನ, ಪರಮ ಪವಿತ್ರ ಪುಣ್ಯಕ್ಷೇತ್ರ. ಸ್ಕಂದ, ಪದ್ಮ, ವಿಷ್ಣು, ಬ್ರಹ್ಮಪುರಾಣಗಳಲ್ಲಿ ಇದರ ಮಹಿಮೆಯನ್ನು ಕೊಂಡಾಡಿದ್ದಾರೆ. ಇದು ಪುರುಷೋತ್ತಮ ಕ್ಷೇತ್ರ, ನೀಲಾಚಲ, ನೀಲಾದ್ರಿ, ಶ್ರೀಕ್ಷೇತ್ರ, ಶಂಖ ಕ್ಷೇತ್ರ, ದಶಾವತಾರ ಕ್ಷೇತ್ರ, ಮರ್ತ್ಯ ವೈಕುಂಠ ಇತ್ಯಾದಿ ನಾಮಗಳಿಂದ ಪ್ರಸಿದ್ಧ. ಸಂಪೂರ್ಣ ಪುರಿ ಕ್ಷೇತ್ರವು ಸ್ವಯಂ ಪುರುಷೋತ್ತಮನ ದೇಹವೇ (ವಪು) ಎಂದು ಪುರಾಣಗಳಲ್ಲಿ ಉಲ್ಲೇಖವಿರುವುದು ಅದರ ಪಾವಿತ್ರ್ಯವನ್ನು ಸೂಚಿಸುತ್ತದೆ. ಯುಗಾಂತರಗಳಿಂದ ಇಲ್ಲಿ ನೆಲೆಸಿ, ಭಕ್ತರನ್ನು ಸಲಹುವ



ಸ್ವಾಮಿ ಜಗನ್ನಾಥನೇ ಇಲ್ಲಿಯ ಆಕರ್ಷಣೆಯ ಕೇಂದ್ರ! ಶಕ್ತಿ ಪೀಠಗಳಲ್ಲಿ ಒಂದಾದ ವಿಮಲಾದೇವಿಯ ನಿವಾಸವೂ ಇಲ್ಲಿ ಜಗನ್ನಾಥನ ಸನ್ನಿಧಿಯಲ್ಲೇ ಇದೆ.

ಶ್ರೀ ರಾಮಕೃಷ್ಣರ ಭಕ್ತರಿಗೆ ಈ ಕ್ಷೇತ್ರ ಇನ್ನೂ ಒಂದು ಕಾರಣಕ್ಕಾಗಿ ಮಹತ್ವವನ್ನು ಪಡೆದಿದೆ. ಅನೇಕ ಬಾರಿ, ಶ್ರೀಮಾತೆ ಶಾರದಾ ದೇವಿಯವರ ಪಾದ ಸ್ಪರ್ಶವಾದ ಪುಣ್ಯ ಭೂಮಿಯಿದು. ಅವರು ೧೮೮೮-೧೮೯೪, ೧೮೯೧, ಮತ್ತು ೧೯೦೪ರಲ್ಲಿ ಈ ಕ್ಷೇತ್ರವನ್ನು ಸಂದರ್ಶಿಸಿ , ಇದರ ಪವಿತ್ರತೆಯನ್ನು ಹೆಚ್ಚಿಸಿದ್ದಾರೆ. ಪರಮ ಭಕ್ತ ಬಲರಾಮ ಬಸುವಿಗೆ ಸೇರಿದ ಕ್ಷೇತ್ರಬಾಷ ಮಠ ಮತ್ತು ಶಶಿ ನಿಕೇತನ ಎಂಬಲ್ಲಿ ಅವರೂ ಸ್ವಾಮಿ ಪ್ರೇಮಾನಂದರೂ ಆಗ ಉಳಿದುಕೊಂಡಿದ್ದರಂತೆ. ಇನ್ನು, ಶ್ರೀ ರಾಮಕೃಷ್ಣರಿಗೆ ಅದ್ವೈತ ದೀಕ್ಷೆ ನೀಡಿದ ಗುರು ತೋತಾಪುರಿಯವರೂ ಇಲ್ಲಿ ವಾಸಿಸಿದ್ದು, ತಮ್ಮ ಕೊನೆಯ ಸುಮಾರು ೪೦-೫೦ ವರ್ಷಗಳನ್ನು ಇಲ್ಲೇ ಕಳೆದಿದ್ದರು ಎಂದೂ ಹೇಳಲಾಗುತ್ತಿದೆ. ಈಗ ಇಲ್ಲಿಯ ಸುಂದರ, ಶಾಂತ ಪರಿಸರದಲ್ಲಿರುವ ಅದ್ವೈತ ಬ್ರಹ್ಮ ಆಶ್ರಮದಲ್ಲಿ ಅವರು ಆರಾಧಿಸಲ್ಪಡುತ್ತಿದ್ದಾರೆ. ಇಲ್ಲಿಯ ಸಮುದ್ರ ತೀರದಲ್ಲಿಯ ಶಾಂತ, ಗಂಭೀರ ವಾತಾವರಣದಲ್ಲಿ, ರಾಮಕೃಷ್ಣ ಮಠ ಮತ್ತು ಮಿಷನ್ ನ ಎರಡು ಶಾಖೆಗಳಲ್ಲಿ ಭಗವಾನ್ ಶ್ರೀರಾಮಕೃಷ್ಣರೂ ನಿತ್ಯ ದರ್ಶನ ವೀಯುತ್ತಿರುವುದು ಭಕ್ತರಿಗೆ ಮತ್ತಷ್ಟು ಸಂತಸದ ವಿಚಾರ. ಆಚಾರ್ಯ ಶ್ರೀ ಶಂಕರರು ಸ್ಥಾಪಿಸಿದ ಚತುರಾಮ್ನಾಯ ಪೀಠಗಳಲ್ಲಿ ಮೊತ್ತ ಮೊದಲ, 'ಪ್ರಜ್ಞಾನಂ ಬ್ರಹ್ಮ' ಎಂದು ಸಾರುವ, ಗೋವರ್ಧನ ಪೀಠ ಇಲ್ಲಿಯೇ ಇದೆ. ಆಚಾರ್ಯ ಪದ್ಮಪಾದರಿಂದ ಪ್ರಾರಂಭ ಇಲ್ಲಿಯ ಯತಿಪರಂಪರೆ. ಇದು ಭಕ್ತಿಪಂಥವನ್ನು ಪಸರಿಸಿದ ಚೈತನ್ಯ ಮಹಾಪ್ರಭುವಿನ ಲೀಲಾಕ್ಷೇತ್ರವೂ ಹೌದು.

ಯುಗಾಂತರಗಳಿಂದ ಇಲ್ಲಿ ಜಗನ್ನಾಥನ ಸಾನ್ನಿಧ್ಯವಿತ್ತೆಂದು ನಂಬಲಾಗಿದ್ದರೂ, ಈಗಿರುವ ದೇವಾಲಯದ ಕಟ್ಟಡದ ಸ್ಥಾಪನೆಯಾಗಿರುವುದು ಕ್ರಿ. ಶ.೧೨೧೨ ರಲ್ಲಿ. ಇದೊಂದು ಭವ್ಯ, ವಿಶಾಲ, ಕಲಾತ್ಮಕ, ನಾಗರ ಶೈಲಿಯ ಸುಂದರ ರಚನೆ. ಸುಮಾರು ಹತ್ತು ಎಕರೆ ಪ್ರದೇಶದಲ್ಲಿ, ನಗರದ ಹೃದಯ ಭಾಗವನ್ನು ಆವರಿಸಿದೆ ಈ ಆಲಯ. ದೇವಾಲಯದ ಸುತ್ತ ಸುಮಾರು ೨೦-೨೫ ಅಡಿ ಎತ್ತರದ ಪೌಳಿ. ನಾಲ್ಕು ದಿಕ್ಕಿನಲ್ಲಿ ನಾಲ್ಕು ಮಹಾದ್ವಾರಗಳು. ಪೂರ್ವದಲ್ಲಿ ಸಿಂಹದ್ವಾರ. ದ್ವಾರದ ಎರಡೂ ಬದಿಯಲ್ಲಿ ಎರಡು ಆಕರ್ಷಕ ಸಿಂಹದ ವಿಗ್ರಹಗಳು. ಹೀಗೆಯೇ ದಕ್ಷಿಣ, ಪಶ್ಚಿಮ, ಉತ್ತರದಲ್ಲಿ - ಅಶ್ವ, ವ್ಯಾಘ್ರ, ಮತ್ತು ಹಸ್ತಿ ದ್ವಾರಗಳು. ಸಿಂಹದ್ವಾರ ದೇವಾಲಯದ ಪ್ರಮುಖ ದ್ವಾರ. ಸಿಂಹದ್ವಾರದ ಮುಂದೆ ಷೋಡಶ ಭುಜದ ೩೪ ಅಡಿ ಎತ್ತರದ ಏಕಶಿಲಾ ಸ್ತಂಭವಿದ್ದು ಇದನ್ನು ಅರುಣ ಸ್ತಂಭ ಎನ್ನುತ್ತಾರೆ. ಇದರ ಮೇಲೆ ಸೂರ್ಯ ಸಾರಥಿ ಅರುಣನ ಸುಂದರ ವಿಗ್ರಹವಿದೆ.

ಈ ದೇವಾಲಯ ಪ್ರಾಚೀನ ಭಾರತೀಯ ಸ್ಥಾಪತ್ಯ ಕೌಶಲ್ಯದ ಒಂದು ಅದ್ಭುತ ಉದಾಹರಣೆ. ಹೊರ ಪ್ರಾಕಾರ ೬೬೫ ಅಡಿ ಉದ್ದ , ೬೪೦ ಅಡಿ ಅಗಲ. ಮುಖ್ಯ ದ್ವಾರದಿಂದ ೨೨ ಮೆಟ್ಟಿಲುಗಳ ಮೂಲಕ ಪ್ರವೇಶ. ಒಳಗೆ ಬರುತ್ತಿದ್ದಂತೆ, ಬಲಭಾಗದ ಸಣ್ಣ ಮಂದಿರದಲ್ಲಿ ಮೂಲವಿಗ್ರಹವನ್ನೇ ಹೋಲುವ 'ಪತಿತ ಪಾವನ' ಮೂರ್ತಿ ಇದೆ. ದೇವಳಕ್ಕೆ ಪ್ರವೇಶವಿಲ್ಲದವರಿಗೆ ಹೊರಗಿನಿಂದಲೇ ದರ್ಶನಕ್ಕೆ ಈ ವ್ಯವಸ್ಥೆ.

ವಿಮಾನ, (ಗರ್ಭಗೃಹ) ಜಗಮಂದಿರ, ನೃತ್ಯಮಂಟಪ, ಭೋಗ ಮಂಟಪ, ದೇವಾಲಯದ ಪ್ರಧಾನ ಭಾಗಗಳು. ದೇವಾಲಯದ ಎತ್ತರ ೨೧೫ ಅಡಿಗಳು. ವಿಮಾನದ ಮೇಲೆ ೧೨ ಮೊಳ ವ್ಯಾಸದ, ಅಷ್ಟಧಾತುವಿನ ಸುಂದರ ನೀಲಚಕ್ರ. ದಿನವೂ ಹಾರುತ್ತಿರುತ್ತದೆ ಇದರ ಮೇಲೆ, ದೂರ ದೂರವೂ ಗೋಚರಿಸುವ ಬೃಹತ್ ಧರ್ಮ ಧ್ವಜ ! ಈ ಧ್ವಜವನ್ನು ಪ್ರತಿದಿನ ಬದಲಾಯಿಸುತ್ತಾರೆ.

ದ್ವಾರಗಳಲ್ಲಿಯೂ, ದೇವಾಲಯದ ಭಿತ್ತಿಗಳಲ್ಲೂ , ಸುಂದರ, ಸೂಕ್ಷ್ಮ ಕೆತ್ತನೆಗಳನ್ನು ಕಾಣಬಹುದು. ಒಳಗಿನ ಪ್ರಾಕಾರದಲ್ಲಿ ವಿಷ್ಣುವಿನ ಕೇಶವಾದಿ ೨೪ ರೂಪಗಳನ್ನು ಸುಂದರವಾಗಿ ಕೆತ್ತಲಾಗಿದೆ. ಇಲ್ಲಿ ವಿಮಲಾದೇವಿಯ ಮಂದಿರವಲ್ಲದೆ ಸತ್ಯನಾರಾಯಣ,ಅಗ್ನೀಶ್ವರ,ನರಸಿಂಹ, ಲಕ್ಷ್ಮೀ, ಸೂರ್ಯ, ಭುವನೇಶ್ವರಿ, ಗಣಪತಿ, ಆಂಜನೇಯ ಮುಂತಾದ ಇನ್ನೂ ಅನೇಕ ಉಪ ಮಂದಿರಗಳಿವೆ. ಮುಕ್ತಿ ಮಂಟಪವೆಂದು ಕರೆಯಲ್ಪಡುವ ಕೇವಲ ಕೆಲವು ವಿಶಿಷ್ಟ ವ್ಯಕ್ತಿಗಳಿಗೆ ಮಾತ್ರ ಮೀಸಲಾದ ಒಂದು ವೇದಿಕೆ ಇದೆ. ದೇವಾಲಯದ ಹಿಂಭಾಗದಲ್ಲಿ ಒಂದು ಪುರಾತನ, ವಿಶಾಲ ವಟ ವೃಕ್ಷ ವಿದೆ.ಇದನ್ನು ಕಲ್ಪವಟ ಎನ್ನುತ್ತಾರೆ.

ದೇವಾಲಯದ ಪಾಕಶಾಲೆ ಒಂದು ಪ್ರೇಕ್ಷಣೀಯ ಸ್ಥಳ. ರೋಶಘರ ಇದರ ಹೆಸರು. ಜಗತ್ತಿನ ಅತಿದೊಡ್ಡ ಪಾಕಶಾಲೆಯೆಂದೇ ಪ್ರತೀತಿ. ಜಗನ್ನಾಥ ಭೋಜನ ಪ್ರಿಯ. ೫೨ ಬಗೆಯ ವಿವಿಧ ಭಕ್ಷ್ಯ ಭೋಜ್ಯಗಳ ನೈವೇದ್ಯ ಅವನಿಗೆ. ಅದಕ್ಕಾಗಿ ನೂರಾರು ಬಾಣಸಿಗರು ತುಂಬಾ ಶ್ರದ್ಧೆ ಯಿಂದ ದುಡಿಯುತ್ತಾರೆ. ಅಡಿಗೆಯ ಸೇವೆಯವರು ಮಡಿಯಲ್ಲಿರುತ್ತಾರೆ ಮತ್ತು ತಮ್ಮ ಮುಖವನ್ನು ವಸ್ತ್ರದಿಂದ ಮುಚ್ಚಿರುತ್ತಾರೆ. ಸಾಂಪ್ರದಾಯಿಕ ರೀತಿಯಲ್ಲಿ ಅಡುಗೆ ಮಾಡುತ್ತಾರೆ. ೨೪೦ ಒಲೆಗಳಲ್ಲಿ ಅಡುಗೆ. ಪ್ರತಿಯೊಂದು ಒಲೆಯಲ್ಲೂ ೭ ಪಾತ್ರೆಗಳು (೩+೩+೧) ಹೀಗೆ ಒಂದರ ಮೇಲೊಂದು ಪೇರಿಸಿ). ಒಮ್ಮೆ ಪಾತ್ರೆಯಲ್ಲಿ ಬೇಕಾದ ಪದಾರ್ಥಗಳನ್ನು ತುಂಬಿಸಿ ಬೇಯಿಸಲು ಇಟ್ಟಮೇಲೆ ಮತ್ತೆ ಅದನ್ನು ತೆರೆಯುವುದು ನೇರವಾಗಿ ನೈವೇದ್ಯಕ್ಕೆ. ಮಧ್ಯೆ ಕೈಯಾಡಿಸುವ ಆವಶ್ಯಕತೆ ಇಲ್ಲವಂತೆ. ಎಲ್ಲ ಪಾತ್ರೆಗಳಲ್ಲಿ ಏಕಪ್ರಕಾರವಾಗಿ ನೈವೇದ್ಯ ಸಿದ್ಧಗೊಳ್ಳುತ್ತದಂತೆ. ಇದೊಂದು ಅದ್ಭುತ !

ಇಲ್ಲಿ ಸಿದ್ಧವಾದ ಪ್ರಸಾದ ಜಾತಿಭೇದವಿಲ್ಲದೆ ಎಲ್ಲರಿಗೂ ಲಭ್ಯ. ಇದನ್ನು ಆನಂದ ಬಜಾರ್ ಎಂಬಲ್ಲಿ ವಿತರಿಸುತ್ತಾರೆ. ಪ್ರಸಾದವನ್ನು ಯಾವಾಗಲೂ ಒಂದೇ ಪ್ರಮಾಣದಲ್ಲಿ ತಯಾರಿಸಿದರೂ ಯಾತ್ರಿಗಳು ಎಷ್ಟಿದ್ದರೂ ಎಲ್ಲರಿಗೂ ಸಾಕಾಗುವುದಲ್ಲದೇ, ಹೆಚ್ಚಾಗಿ ಉಳಿಯುವುದೂ ಇಲ್ಲವಂತೆ ! ಇಲ್ಲಿಯ ಪ್ರಸಾದ ತುಂಬಾ ಸ್ವಾದಿಷ್ಟ !

ದೇವಾಲಯದ ಹೊರಾಂಗಣದ ಉತ್ತರಭಾಗದಲ್ಲಿ 'ಕೊಯ್ಲಿ ವೈಕುಂಠ' ಎನ್ನುವ ಒಂದು ಸ್ಥಳವಿದೆ. ಸಾಮಾನ್ಯವಾಗಿ ೧೨ ವರ್ಷಗಳಲ್ಲೊಮ್ಮೆ ನಡೆಯುವ ನವಕಲೇಬರ ಎಂಬ, ದೇವರ ಹೊಸ ದಾರು ವಿಗ್ರಹಗಳ ಪ್ರತಿಷ್ಠಾ ಕಾರ್ಯಕ್ರಮದ ನಂತರ ಹಳೆಯ ವಿಗ್ರಹಗಳನ್ನು ಇಲ್ಲಿ ಸಮಾಧಿ ಮಾಡುತ್ತಾರೆ. ಹೊಸವಿಗ್ರಹಗಳ ರಚನೆಗೆ ಮರಗಳ ಆಯ್ಕೆಯಿಂದ ಮೊದಲ್ಗೊಂಡು, ಹಳೆಯ ವಿಗ್ರಹಗಳಿಂದ ಬ್ರಹ್ಮ ವಸ್ತುವನ್ನು ಹೊಸ ವಿಗ್ರಹಗಳಿಗೆ ವಿಧಿವತ್ತಾಗಿ ವರ್ಗಾಯಿಸುವ ಪ್ರಕ್ರಿಯೆಗಳು ತುಂಬಾ ರೋಚಕ, ಕೆಲವು ರಹಸ್ಯಮಯ.

ದೇವಾಲಯದ ಪ್ರವೇಶ ದ್ವಾರದಿಂದ ನೇರವಾಗಿ ಒಳಗೆ ಹೋದಂತೆ ದೂರದಿಂದಲೇ ಎತ್ತರವಾದ ರತ್ನವೇದಿ ಎಂಬ ವೇದಿಕೆಯ ಮೇಲೆ ಬಲಭದ್ರ, ಸುಭದ್ರೆ ಹಾಗೂ ಜಗನ್ನಾಥನ ಮನಮೋಹಕ ಮೂರ್ತಿಗಳ ದರ್ಶನವಾಗುತ್ತದೆ. ಪಕ್ಕದಲ್ಲಿ ೬ ಅಡಿ ಎತ್ತರದ ಸುದರ್ಶನ ಚಕ್ರವೂ ಪೂಜೆಗೊಳ್ಳುತ್ತದೆ. ಮುಂಜಾನೆ ೪.೩೦ ಘಂಟೆಯಿಂದ ರಾತ್ರಿ ೧೧.೩೦ ವರೆಗೆ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯಗಳು ನಡೆಯುತ್ತಲೇ ಇರುತ್ತವೆ. ಸುಮಾರು ೮೫-೯೦ ಅರ್ಚಕರು ಅಥವಾ ಸೇವಕರು ಇದರಲ್ಲಿ ತೊಡಗಿರುತ್ತಾರೆ

ಜನಜಂಗುಳಿ ಹಾಗೂ ನೂಕುನುಗ್ಗಲು ಇಲ್ಲಿ ಸಾಮಾನ್ಯ. ವ್ಯವಸ್ಥಿತ ದರ್ಶನ ಕಲ್ಪಿಸುವ ಆವಶ್ಯಕತೆ ಇದೆ. ನಾವು ಪಂಡನೊಬ್ಬನನ್ನು ಸಹಾಯಕ್ಕಾಗಿ ಕರೆದಿದ್ದೆವು. ಅವನು ನಮಗೆದುರಾಗಿ ನಿಂತು ಎರಡೂ ಕೈಗಳನ್ನು ಚಾಚಿ ಒಂದೊಂದೇ ಹೆಜ್ಜೆ ಹಿಂದೆ ಹೋಗುತ್ತ, ನಮ್ಮನ್ನು ಒಂದೊಂದೇ ಹೆಜ್ಜೆ ಮುಂದೆ ಬರುವಂತೆ ಮಾಡಿ, ವೇದಿಕೆಯವರೆಗೂ ನಾವು ಮುಗ್ಗರಿಸದೆ ಸಾಗುವಂತೆ ಮಾಡಿದ. ಮುಂದೆ ಸಾಕ್ಷಾತ್ ಜಗನ್ನಾಥ! ದೇವರ ದರ್ಶನದಿಂದ ಆಯಾಸವೆಲ್ಲ ಮರೆತು ಹೋಗಿತ್ತು. ಮನಸ್ಸು ಅಪೂರ್ವ ಆನಂದವನ್ನು ಅನುಭವಿಸುತ್ತಿತ್ತು. ಅಲ್ಲೇ ನಿಲ್ಲಲು ಬಯಕೆಯಿದ್ದರೂ ಹಿಂದಿನಿಂದ ಜನರ ಒತ್ತಡದಿಂದ ಹೊರಗೆ ಬರಬೇಕಾಯ್ತು. ಪಂಡ ತುಂಬಾ ಚಾಣಾಕ್ಷತನದಿಂದ ನಮ್ಮನ್ನು ಹೊರಗೆ ಕರೆತಂದು, ಪ್ರಸಾದವನ್ನೂ ಪಡೆಯಲು ಸಹಕರಿಸಿದ.

ದೇವಳದಲ್ಲಿನ ಮುಖ್ಯ ಅಂಶಗಳೆಲ್ಲವನ್ನೂ ತೋರಿಸಿ, ಊರಿನ ಉಳಿದ ಮುಖ್ಯ ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಗೆ ಒಂದು ವಾಹನವನ್ನೂ ಏರ್ಪಡಿಸಿ ಕೊಟ್ಟು ಚಾಲಕನಿಗೂ ತಕ್ಕ ಸೂಚನೆಗಳನ್ನು ಅವನೇ ನೀಡಿದ್ದರಿಂದ ನಮಗೆ ತುಂಬಾ ಅನುಕೂಲವಾಯ್ತು. ದೇವಾಲಯದ ಪೂರ್ವದಲ್ಲಿ ರಥಯಾತ್ರೆ ನಡೆಯುವ ರಾಜಮಾರ್ಗವಿದೆ. ಇಕ್ಕೆಲಗಳಲ್ಲಿ ಅಂಗಡಿ ಮುಂಗಟ್ಟುಗಳು. ಜಾಗಟೆ, ಶಂಖ, ಪೂಜಾ ಪರಿಕರಗಳು, ಜಗನ್ನಾಥನ ವಿಗ್ರಹಗಳ ಸ್ಮರಣಿಕೆಗಳು ಇಲ್ಲಿ ಲಭ್ಯ. ಹತ್ತಿರದ ಒಳ ರಸ್ತೆಗಳಲ್ಲಿ ಇಲ್ಲಿಯ ಜನಪ್ರಿಯ ರಸಗುಲ್ಲ, ಜಿಲೇಬಿ, ಫೇಡಾ ಮುಂತಾದ ತಿನಿಸುಗಳು ಮಾರಲ್ಪಡುತ್ತವೆ. ಇಲ್ಲಿನ ರಸಗುಲ್ಲ ತುಂಬಾ ರುಚಿಕರ.

ವರ್ಷವಿಡೀ ಇಲ್ಲಿ ಉತ್ಸವಾದಿಗಳು ಆಚರಿಸಲ್ಪಡುತ್ತಿದ್ದರೂ, ವಾರ್ಷಿಕವಾಗಿ ಆಷಾಢ ಮಾಸದಲ್ಲಿ ನಡೆಯುವ ರಥಯಾತ್ರೆ ವಿಶ್ವಪ್ರಸಿದ್ಧ. ರಥಯಾತ್ರೆಯಲ್ಲಿ ಪಾಲ್ಗೊಂಡವರಿಗೆ ಮೋಕ್ಷ ಎಂಬ ನಂಬಿಕೆ ಇಲ್ಲಿನವರಿಗೆ. ವಿಶ್ವದೆಲ್ಲೆಡೆಯಿಂದ ಲಕ್ಷಗಟ್ಟಲೆ ಜನರು ಈ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಜಗನ್ನಾಥ ಮಂದಿರದಿಂದ ೩



ಕಿ.ಮೀ. ದೂರದ ಗುಂಡಿಚಾ ಮಂದಿರದ ವರೆಗೆ ಜನ ಕಿಕ್ಕಿರಿದು ನೆರೆದಿರುತ್ತಾರೆ. ನಂದಿಘೋಷ, ತಾಳಧ್ವಜ, ಹಾಗೂ ದರ್ಪದಲನ ಹೆಸರಿನ ರಂಗುರಂಗಿನ ಆಕರ್ಷಕ ರಥಗಳಲ್ಲಿ ಕ್ರಮವಾಗಿ ಜಗನ್ನಾಥ, ಬಲರಾಮ ಹಾಗೂ ಸುಭದ್ರೆಯರು ಗುಂಡಿಚಾ ಮಂದಿರ ತಲುಪಿ ೯ ದಿನ ಅಲ್ಲೇ ಪೂಜೆಗೊಳ್ಳುತ್ತಾರೆ. ೧೦ನೇ ದಿನ ದೇವಾಲಯಕ್ಕೆ ಮರಳುವರು. ಈ ಯಾತ್ರೆಗೆ ಬಹುದಾಯಾತ್ರೆ ಎನ್ನುತ್ತಾರೆ. ಸ್ನಾನ ಯಾತ್ರೆ, ಸಾಯನ ಯಾತ್ರೆ, ದೋಲ್ ಯಾತ್ರೆ, ಚಂದನ ಯಾತ್ರೆ ಇಲ್ಲಿಯ ಇತರ ಮುಖ್ಯ ಪರ್ವಗಳು.

### ಪುರಿ ಧಾಮದ ಇತರ ದರ್ಶನೀಯ ಆಕರ್ಷಣೆಗಳು

**ಮಹೋದಧಿ:** ಇದು ಇಲ್ಲಿನ ಸಮುದ್ರ ತೀರ. ತುಂಬಾ ಆಹ್ಲಾದಕರ. ಸ್ವಚ್ಛ ಹಾಗೂ ಸುಂದರ. ತಿಳಿ ನೀಲಿ ಅಸೀಮ ಜಲರಾಶಿ! ಇಲ್ಲಿನ ಸೂರ್ಯೋದಯ ಮತ್ತು ಸೂರ್ಯಾಸ್ತ ಎರಡೂ ಅತ್ಯಂತ ಮನೋಹರ. ಸಮಯ ಕಳೆದದ್ದೇ ಗೊತ್ತಾಗುವುದಿಲ್ಲ. ಯಾತ್ರೆ ಸಫಲವಾಗಲು ಇಲ್ಲಿ ಸ್ನಾನ ಮಾಡುತ್ತಾರೆ. ಇಲ್ಲಿ ಪ್ರತಿದಿನ ಸಮುದ್ರಕ್ಕೆ ನಡೆಯುವ ಆರತಿ ದರ್ಶನೀಯ. ಪಕ್ಕದಲ್ಲೇ ಸ್ವರ್ಗದ್ವಾರ ಎಂಬ ಸ್ಮಶಾನ ಇದೆ.

**ಮಾರ್ಕಂಡೇಯ ಸರೋವರ:** ಇಲ್ಲಿನ ಶಿವ ದೇವಸ್ಥಾನ ಪ್ರಸಿದ್ಧ.

**ಇಂದ್ರದ್ಯುಮ್ನ ಸರೋವರ:** ಇಲ್ಲಿವೆ ನೀಲಕಂಠೇಶ್ವರ ಮತ್ತು ನಾರಾಯಣರ ಸನ್ನಿಧಾನ.

**ಶ್ವೇತಗಂಗಾ ಸರೋವರ:** ಮತ್ಸ್ಯ ಮಾಧವ ಮತ್ತು ಶ್ವೇತ ಮಾಧವ ಮಂದಿರಗಳು.

**ಪಾರ್ವತಿ ಸರೋವರ:** ಇಲ್ಲಿ ಲೋಕನಾಥ ಹಾಗೂ ಇತರ ಹಲವು ಮಂದಿರಗಳಿವೆ. ಸುತ್ತ ಅರಣ್ಯ ಪ್ರದೇಶ.

**ನರೇಂದ್ರ ಸರೋವರ:** ಚಂದನ ಉತ್ಸವದ ಸಮಯದಲ್ಲಿ ಜಗನ್ನಾಥನ ಉತ್ಸವ ಮೂರ್ತಿಯ ನೌಕಾ ವಿಹಾರದ ಸ್ಥಳ.

**ಚಕ್ರತೀರ್ಥ :** ಇಲ್ಲಿ ಬೇಡಿಯಾ ಹನುಮಾನ್ ಹಾಗೂ ಸೋನಾರ್ ಗೌರಾಂಗ ಮಂದಿರಗಳಿವೆ.

ಪುರಿಯಿಂದ ಸ್ವಲ್ಪ ದೂರದಲ್ಲಿರುವ ಅಲಾರನಾಥ್ ದೇವಾಲಯ ತುಂಬಾ ಪ್ರಸಿದ್ಧ. ಇಲ್ಲಿ ಚೈತನ್ಯ ಮಹಾಪ್ರಭುಗಳು ಸಾಷ್ಟಾಂಗ ಎರಗಿದಾಗ ಅವರ ಭಕ್ತಿಯ ಪ್ರಖರತೆಯಿಂದ ಕಲ್ಲು ಚಪ್ಪಡಿ ಕರಗಿ ಅವರ ದೇಹದ ಭಾಗಗಳ ಅಚ್ಚು ಮೂಡಿರುವುದನ್ನು ಕಾಣಬಹುದು.

## ರಾಮೇಶ್ವರಂ

ಇಲ್ಲಿರುವ ರಾಮನಾಥಸ್ವಾಮಿ ದೇವಸ್ಥಾನದಿಂದಲೇ ಪ್ರಸಿದ್ಧವಾಗಿರುವ ಈ ಊರು ಧಾರ್ಮಿಕ, ಪೌರಾಣಿಕ ಹಾಗೂ ಚಾರಿತ್ರಿಕ ಕಾರಣಗಳಿಂದಾಗಿ ಅತಿ ಪವಿತ್ರ ತೀರ್ಥಕ್ಷೇತ್ರವೆನಿಸಿದೆ. ರಾಮಾಯಣಕ್ಕೂ ಈ ಊರಿಗೂ ಹತ್ತಿರದ ಸಂಬಂಧ. ರಾಮನಾಥ ಲಿಂಗದ ಸ್ಥಾಪನೆಯಾಗಿದ್ದು ತ್ರೇತಾಯುಗದಲ್ಲಿ ಸ್ವಯಂ ಶ್ರೀರಾಮನಿಂದ. ಅಲ್ಲದೇ ಇದನ್ನು ೧೨ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿ ಪರಿಗಣಿಸಲಾಗಿದೆ. ಹೀಗೆ ಇದು ಶೈವ ಸ್ಥಾನವಾದರೂ, ವೈಷ್ಣವರಿಗೂ ಪವಿತ್ರ ಕ್ಷೇತ್ರ. ಶ್ರೀ ರಾಮಕೃಷ್ಣ ಪರಮಹಂಸರ ತಂದೆ ಕ್ಷುದಿರಾಮ ಚಟ್ಟೋಪಾಧ್ಯಾಯರು ೧೮೨೪ರ ಸುಮಾರಿಗೆ ಇಲ್ಲಿಗೆ ಬಂದು ಸಂಗ್ರಹಿಸಿದ ಬಾಣಲಿಂಗಕ್ಕೆ ಈಗಲೂ ಕಾಮಾರಪುಕುರದಲ್ಲಿ ಪೂಜೆ ಸಲ್ಲುತ್ತಿರುವುದು ನಮಗೆ ತಿಳಿದಿದೆ. ಇದೇ ರೀತಿ ಶ್ರೀಮಾತೆ ಶಾರದಾದೇವಿಯವರು ಕ್ರಿ.ಶ. ೧೮೧೧ರ ಸುಮಾರಿಗೆ ಇಲ್ಲಿಗೆ ಆಗಮಿಸಿ ರಾಮನಾಥ ಸ್ವಾಮಿಯನ್ನು ನೂರೆಂಟು ಚಿನ್ನದ ಬಿಲ್ವದಳಗಳಿಂದ ಅರ್ಚಿಸಿದ್ದರು. ('ತಾವು ಇಲ್ಲಿ ಹೇಗಿಟ್ಟಿದ್ದೆನೋ ಹಾಗೆಯೇ ಇದೆ' ಎಂದು ಅವರು ತಮ್ಮ ಸೀತೆಯ ಅವತಾರವನ್ನು ನೆನಪಿಸಿಕೊಂಡಿದ್ದರಂತೆ. ಇದೊಂದು ಅದ್ಭುತ ಘಟನೆ.) ಇದು ಸ್ವಾಮಿ ವಿವೇಕಾನಂದರ ಭೇಟಿಯಿಂದಲೂ ಪವಿತ್ರಗೊಂಡ ಕ್ಷೇತ್ರ. ಹೀಗೆ ಈ ಕ್ಷೇತ್ರಕ್ಕೆ ಬಹು ಮಹತ್ವ. ಇಲ್ಲಿಯ ಯಾತ್ರೆ ತುಂಬಾ ಜನಪ್ರಿಯ ಕೂಡಾ.

ರಾವಣ ವಧೆಯ ಬ್ರಹ್ಮಹತ್ಯಾ ದೋಷ ನಿವಾರಣೆಗೆ, ಋಷಿ ಅಗಸ್ತ್ಯರು ಶಿವಲಿಂಗ ಸ್ಥಾಪಿಸಿ ಪೂಜಿಸುವಂತೆ ಶ್ರೀರಾಮನಿಗೆ ಸಲಹೆ ನೀಡುತ್ತಾರೆ. ಶ್ರೀರಾಮನು ಆಂಜನೇಯನಿಗೆ ಕಾಶಿಯಿಂದ ಶಿವಲಿಂಗವೊಂದನ್ನು ತರಲು ಕಳಿಸುತ್ತಾನೆ. ಆದರೆ ಆಂಜನೇಯ ಬರುವಲ್ಲಿ ವಿಳಂಬವಾಗುತ್ತದೆ. ಮುಹೂರ್ತ ಮೀರಬಾರದೆಂದು ಸೀತೆ ನಿರ್ಮಿಸಿದ ಮರಳಿನ ಲಿಂಗವನ್ನೇ ರಾಮ ಪೂಜಿಸುತ್ತಾನೆ. ನಂತರ ಹನುಮನು ಎರಡು ಲಿಂಗಗಳೊಡನೆ ಮರಳುತ್ತಾನೆ. ನಡೆದ ಸಂಗತಿಯಿಂದ ಬೇಸರಗೊಂಡ ಮಾರುತಿ ರಾಮನನ್ನು ತಾನು ತಂದ ಲಿಂಗವನ್ನು ಸ್ಥಾಪಿಸುವಂತೆ ವಿನಂತಿಸುತ್ತಾನೆ. ರಾಮ ಒಪ್ಪಿ ಈಗಾಗಲೇ ಸ್ಥಾಪಿಸಿದ ಲಿಂಗವನ್ನು ತೆರವುಗೊಳಿಸಲು ಹನುಮನಿಗೆ ತಿಳಿಸುತ್ತಾನೆ. ಮಾರುತಿ ಪ್ರಯತ್ನಿಸಿದರೂ ಸಫಲನಾಗುವುದಿಲ್ಲ. ಕೊನೆಗೆ ತನ್ನ ಬಾಲದಿಂದ ಲಿಂಗವನ್ನು ಸುತ್ತಿ ಎಳೆಯಲು ತೊಡಗಿದಾಗ ಬಾಲವೇ ತುಂಡಾಗುತ್ತದೆ. ಇದು ರಾಮನ ಲೀಲೆಯೆಂದು ಹನುಮನಿಗೆ ಅರಿವಾಗುತ್ತದೆ. ಅವನಿಗೆ ಬೇಸರವಾಗಬಾರದೆಂದು ಶ್ರೀರಾಮನು ಹನುಮಂತ ತಂದ ಲಿಂಗಗಳನ್ನೂ ಸನಿಹದಲ್ಲೇ ಪ್ರತಿಷ್ಠಾಪಿಸುತ್ತಾನೆ.




ಈ ಹನುಮ ತಂದ ಒಂದು ಲಿಂಗವು ಗರ್ಭಗುಡಿಯ ಬಲಭಾಗದಲ್ಲಿ ಕಾಶಿ ವಿಶ್ವನಾಥ ಎಂಬ ಹೆಸರಿನಿಂದ ಪೂಜಿಸಲ್ಪಡುತ್ತಿದೆ. ಇನ್ನೊಂದು ದೇವಸ್ಥಾನದ ಪ್ರವೇಶ ದ್ವಾರದ ಬಳಿಯಿರುವ ವಿಶ್ವರೂಪ ಮಾರುತಿಯ ಬಳಿ ಸ್ಥಾಪಿತವಾಗಿದೆ. ಬಾಲ ತುಂಡಾದ ಘಟನೆಗೆ ಸಾಕ್ಷಿಯಾಗಿ ಭದ್ರಕಾಳಿ ದೇವಸ್ಥಾನದ ಬಳಿ ತುಂಡು ಬಾಲದ ಹನುಮಂತನ ಆಲಯವಿದೆ.

ರಾಮನಾಥ ಸ್ವಾಮಿಯ ಬೃಹತ್ ದೇವಾಲಯ, ಗಾತ್ರ, ವಿಸ್ತೀರ್ಣಗಳಲ್ಲಿ ಜಗತ್ತಿನಲ್ಲೇ ಅದ್ವಿತೀಯ! ಸಂಪೂರ್ಣ ಶಿಲಾಮಯ ಈ ಕಟ್ಟಡ. ಈ ದ್ವೀಪದಲ್ಲಿ ಎಲ್ಲೂ ಕಲ್ಲಿನ ಗಣಿಗಳು ಲಭ್ಯವಿಲ್ಲ. ಇಲ್ಲಿಗಿದ್ದದ್ದು ಕೇವಲ ಜಲಮಾರ್ಗ ಮಾತ್ರ. ಯಾವುದೇ ಆಧುನಿಕ ಯಂತ್ರಗಳ ಸಹಾಯವಿಲ್ಲದ, ಆ ಕಾಲದಲ್ಲಿ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ದೇವಾಲಯಕ್ಕೆ ಬೇಕಾದ ಶಿಲೆಗಳನ್ನು ಹೇಗೆ ತಂದರೋ! ಇದು ಅದ್ಭುತ ಸಾಧನೆಯೇ ಸರಿ.

ದೇವಾಲಯದ ಗರ್ಭಗುಡಿ ಮೂರು ವಿಶಾಲ ಪ್ರಾಕಾರಗಳನ್ನು ಹೊಂದಿದೆ. ಈ ಕಟ್ಟಡದ ವಿನ್ಯಾಸ, ರಚನೆ ಭಾರತೀಯ ವಾಸ್ತು ಕೌಶಲ್ಯದ ಉತ್ಕೃಷ್ಟತೆಗೆ ಜೀವಂತ ಸಾಕ್ಷಿ. ಜಗತ್ಪ್ರಸಿದ್ಧ ಹೊರಗಿನ ಪ್ರಾಕಾರದ ಉದ್ದ ಪೂರ್ವ ಪಶ್ಚಿಮ ೬೯೦ ಅಡಿ. ಉತ್ತರ ದಕ್ಷಿಣ ೪೩೫ ಅಡಿ. ಇಷ್ಟರಿಂದಲೇ ಈ ದೇವಾಲಯದ ಭವ್ಯತೆಯನ್ನು ಊಹಿಸಬಹುದು. ಪ್ರಾಕಾರದ ಅಗಲ ೧೭ ಅಡಿ. ಎತ್ತರ ೨೨ ಅಡಿ. ೫ ಅಡಿ ಎತ್ತರದ ಜಗಲಿಯ ಮೇಲೆ ೧೨೧೨ ಸ್ತಂಭಗಳನ್ನು ಏಕ ರೇಖೆಯಲ್ಲಿ ಜೋಡಿಸಿರುವುದು ಒಂದು ಅದ್ಭುತವೇ ಸರಿ! ಮೂರು ಪ್ರಾಕಾರಗಳಲ್ಲೂ ಇದೇ ತರಹದ ವಾಸ್ತು ಸೌಂದರ್ಯ ಕಾಣಬರುತ್ತದೆ. ಪ್ರಾಕಾರದ ಸ್ತಂಭಗಳಲ್ಲಿ, ಸುತ್ತಲಿನ ಗೋಡೆಗಳಲ್ಲಿ ಶಿವನ ಲೀಲೆಗಳ ಆಕರ್ಷಕ ಶಿಲ್ಪಗಳಿವೆ. ಛಾವಣಿಗಳಲ್ಲಿ, ದೇವ ದೇವಿಯರ ಮನಮೋಹಕ ಚಿತ್ರಗಳನ್ನೂ, ವಿವಿಧ ವಿನ್ಯಾಸಗಳನ್ನೂ ವರ್ಣರಂಜಿತವಾಗಿ ಚಿತ್ರಿಸಲಾಗಿದೆ.

ದೇವಾಲಯದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದ್ವಾರಗಳು; ನಾಲ್ಕು ಗೋಪುರಗಳು. ಪೂರ್ವದ ದ್ವಾರ ಪ್ರಧಾನ ದ್ವಾರ. ಅಲ್ಲಿನ



ಬೃಹತ್ ಗೋಪುರದಲ್ಲಿ ಸೂಕ್ಷ್ಮ ಶಿಲ್ಪಕಲಾ ಚಾತುರ್ಯವನ್ನು ಕಾಣಬಹುದು.

ದೇವಾಲಯದ ಅತ್ಯಂತ ಒಳಗಿನ ಪ್ರಾಕಾರದ ಪ್ರವೇಶ ದ್ವಾರದಲ್ಲಿ ಶಿವನ ವಾಹನ ನಂದಿಯ ಸುಮಾರು ೨೨ ಅಡಿ ಎತ್ತರದ ಬೃಹತ್ ವಿಗ್ರಹ ಕಣ್ ಸೆಳೆಯುತ್ತದೆ. ಒಳಗೆ ಪ್ರವೇಶಿಸಿದರೆ ಗರ್ಭಗುಡಿಯಲ್ಲಿ ಸಾಕ್ಷಾತ್ ಶ್ರೀರಾಮ ಪೂಜಿಸಿದ ರಾಮೇಶ್ವರನ ಮೂಲ ಲಿಂಗದ ದರ್ಶನ ! ಮಾತಿನಲ್ಲಿ ವರ್ಣಿಸಲಾಗದ ಕೇವಲ ಅನುಭವಿಸಲು ಮಾತ್ರ ಸಾಧ್ಯವಿರುವ ಅಪೂರ್ವ ಆನಂದ ! ಅನಿರ್ವಚನೀಯ ಅನುಭವ. ಹತ್ತಿರದಲ್ಲೇ ಹನುಮ ತಂದ ಕಾಶಿ ವಿಶ್ವನಾಥ ಲಿಂಗ. ಪ್ರಾಕಾರದ ಪ್ರದಕ್ಷಿಣ ಪಥದಲ್ಲಿ ಸಾಲಾಗಿ ಶಿವಲಿಂಗಗಳು, ದೇವ ದೇವಿಯರ ಸುಂದರ ವಿಗ್ರಹಗಳಿವೆ. ಗರ್ಭಗುಡಿಯ ಬಲಭಾಗದಲ್ಲಿ ಪರ್ವತವರ್ಧಿನಿ ಅಮ್ಮನವರ ದೇವಸ್ಥಾನ. ಇದು ವಿಶಾಲವೂ, ಆಕರ್ಷಕ ವಾಸ್ತುವಿನ್ಯಾಸಗಳಿಂದ ಕೂಡಿದ್ದೂ ಆಗಿದೆ. ದೇವಿಯ ವಿಗ್ರಹ ಅತ್ಯಂತ ಸೌಮ್ಯ ಮುಖಭಾವದಿಂದ ಭಕ್ತರನ್ನು ಅನುಗ್ರಹಿಸುತ್ತಿದೆ. ಈ ದೇವಾಲಯದ ವಸಂತ ಮಂಟಪ, ಸೇತುಪತಿ ಮಂಟಪಗಳು ಅದ್ಭುತ ಕೆತ್ತನೆಗಳನ್ನೊಳಗೊಂಡ ಸಾಲು ಸ್ತಂಭಗಳಿಂದ ಪ್ರಸಿದ್ಧವಾಗಿವೆ. ಇಲ್ಲಿಯ ನಟರಾಜ ವಿಗ್ರಹ ಅದ್ಭುತ ಶಿಲ್ಪ ಕಲಾ ನೈಪುಣ್ಯದ ಪ್ರತೀಕವಾಗಿದೆ

ಹೊರಪ್ರಾಕಾರದಲ್ಲಿ ಗಣಪತಿಯ ದೊಡ್ಡದೊಂದು ವಿಗ್ರಹವಿದೆ. ಹೊರ ಪ್ರಾಕಾರದ ಪಶ್ಚಿಮ ದ್ವಾರದ ಎಡಭಾಗದಲ್ಲಿ ಶ್ರೀ ಸಂಸ್ಥಾನ ಕಾಶೀಮಠದ ವತಿಯಿಂದ ನಿರ್ವಹಿಸಲಾಗುತ್ತಿರುವ ಮಂದಿರದಲ್ಲಿ ಹನುಮತ್ ಲಕ್ಷ್ಮಣ ಸಮೇತ ಸೀತಾ-ರಾಮರ ಪ್ರಾಚೀನ, ಮೋಹಕ ವಿಗ್ರಹಗಳಿವೆ. ಹಾಗೆಯೇ ಮುಂದುವರಿದರೆ ಮಹಾದ್ವಾರದ ಹತ್ತಿರ ಎಡಭಾಗದಲ್ಲಿ ಸಭಾಪತಿ ಮಂದಿರವನ್ನು ಕಾಣಬಹುದು. ಇದನ್ನು ಸಂಪೂರ್ಣವಾಗಿ ರುದ್ರಾಕ್ಷಿಗಳಿಂದ ಮಾಡಲಾಗಿದೆ. ದೇವರ ಲಿಂಗವೂ ಪೂರ್ಣವಾಗಿ ರುದ್ರಾಕ್ಷಿಗಳಿಂದ ಆವೃತವಾಗಿದೆ. ಅದರ ಮುಂದೆಯೇ ಪತಂಜಲಿ ಋಷಿಯ ಸಮಾಧಿ ಇದೆಯೆನ್ನುವುದು ಎಷ್ಟೋ ಜನರಿಗೆ ತಿಳಿಯದ ಸಂಗತಿ.

ರಾಮಾಯಣದ ಘಟನೆಗಳಿಗೆ ಸಂಬಂಧ ಕಲ್ಪಿಸುವ ಹಲವಾರು ತೀರ್ಥಗಳು, ದೇವಾಲಯಗಳು ಸುತಮುತ್ತಲಿನ ಪ್ರದೇಶಗಳಲ್ಲಿವೆ. ೫೧ ತೀರ್ಥಗಳಿವೆಯಂತೆ. ಅದರಲ್ಲಿ ದೇವಾಲಯದ ಪೂರ್ವದಲ್ಲಿರುವ ಸಮುದ್ರವೇ- ಅಗ್ನಿತೀರ್ಥ. ದೇವಾಲಯದ ಆವರಣದ ಒಳಗೆ ನಳ, ನೀಲ, ಗಂಗೆ, ಯಮುನೆ, ಸರಸ್ವತಿ, ಸೇತು ಮಾಧವ ಮುಂತಾದ ೨೨ ತೀರ್ಥಗಳಿವೆ. ಮೊದಲು ಅಗ್ನಿತೀರ್ಥದಲ್ಲಿ ಸಮುದ್ರ ಸ್ನಾನ, ಪೂಜೆ ಮಾಡಿ, ಉಳಿದ ೨೨ ತೀರ್ಥಗಳಲ್ಲಿ ಮಿಂದು, ಬಟ್ಟೆ ಬದಲಿಸಿ ದೇವರ ದರ್ಶನ ಪಡೆಯುವ ವಾಡಿಕೆ.

ನಾವು ರಾಮೇಶ್ವರಕ್ಕೆ ಹೋದಾಗ ಸಂಸ್ಥಾನ ಕಾಶೀಮಠದಲ್ಲಿ ಉಳಿದುಕೊಂಡಿದ್ದೆವು. ಅಲ್ಲಿನ ಪುರೋಹಿತರು ಕ್ಷೇತ್ರ ಯಾತ್ರೆಯ ವಿಧಿಗಳನ್ನು ಕ್ರಮಬದ್ಧವಾಗಿ ಮಾಡಿಸಲು ಒಪ್ಪಿದ್ದರು. ಹಾಗೆಯೇ ಮುಂಜಾನೆ ಸಮುದ್ರ ಸ್ನಾನಕ್ಕೆ ಹೋಗಿ, ಸೇತು, ಧನುಸ್ಸು, ಸಮುದ್ರಾದಿಗಳ ಸಂಕಲ್ಪ ಸಹಿತ ಪೂಜೆ ಮಾಡಿ, ನಂತರ ೩೨ ಬಾರಿ ಮುಳುಗು ಹಾಕಬೇಕಾಗಿತ್ತು. ನೀರಿಗಿಳಿಯುವ ಮುನ್ನ ಹಣದ ಪರ್ಸ್ ಇತ್ಯಾದಿ ಬೆಲೆಬಾಳುವ ವಸ್ತುಗಳನ್ನು ದಡದಲ್ಲಿ ಬಿಟ್ಟು ಹೋಗುವಂತೆ ಅವರು ಸೂಚಿಸಿದ್ದರೂ, ನಾನು ಹಣವನ್ನು ಒಂದು ಸಣ್ಣ ಪರ್ಸಿನಲ್ಲಿಟ್ಟು, ಝಿಪ್ ಹಾಕಿ, ಅದನ್ನು ಇನ್ನೊಂದು ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ, ನನ್ನ ಒಳಉಡುಪಿನ ಕಿಸೆಯಲ್ಲಿ ಭದ್ರವಾಗಿಟ್ಟು, ಮೇಲಿನಿಂದ ಸೇಫ್ಟಿ ಪಿನ್ ಹಾಕಿ ಭದ್ರಪಡಿಸಿದ್ದೆನಾದ್ದರಿಂದ ಪುರೋಹಿತರ ಮಾತನ್ನು ಕಡೆಗಣಿಸಿದೆ. ಇಲ್ಲಿ ಸಮುದ್ರ ತುಂಬ ದೂರದವರೆಗೂ ಸಮತಟ್ಟು ಮತ್ತು ಆಳ ಕಡಿಮೆ. ಅಲೆಗಳಿಲ್ಲ, ತುಂಬಾ ಶಾಂತ. ನಾವು ಮುಳುಗುವಷ್ಟು ಆಳವಿರುವಲ್ಲಿ ಹೋಗಲು ಸುಮಾರು ೨೦೦ ಹೆಜ್ಜೆಗಳಷ್ಟು ನಡೆಯಬೇಕಾಯ್ತು. ನನ್ನ ಪತ್ನಿಯ ಕೊರಳಮಟ್ಟಕ್ಕೆ ನೀರು ಬಂದ ಜಾಗದಲ್ಲಿ ೩೨ ಮುಳುಗು ಹಾಕಿ, ಸೂರ್ಯನಿಗೆ ನಮಸ್ಕರಿಸಿ, ತೀರಕ್ಕೆ ಬಂದು ನೋಡುವಾಗ ನನ್ನ ಕಿಸೆ ಖಾಲಿ. ಪರ್ಸೂ ಇಲ್ಲ, ಮೇಲೆ ಹಾಕಿದ ಪಿನ್ನೂ ಮಾಯ! ಏನು ಮಾಡಬೇಕೆಂಬುದೇ ತೋಚದ ಸ್ಥಿತಿ. ನನ್ನ ಎಲ್ಲ ಹಣವೂ ಅದರಲ್ಲೇ ಇತ್ತು. ನನ್ನ ಪತ್ನಿ ನಾವು ಮುಳುಗಿದ ಜಾಗದಲ್ಲಿ ಹುಡುಕಿ ನೋಡೋಣ ಎಂದಳು. ಸಮುದ್ರದಲ್ಲಿ ಪರ್ಸ್ ಹುಡುಕಲು ಸಾಧ್ಯವೆ ? ನಾವು ಮುಳುಗಿದ ಸ್ಥಳ ಹೇಗೆ ಗುರುತಿಸುವುದು? ಏನೇ ಆಗಲಿ ಎಂದು ಒಪ್ಪಿದೆ. ನಾವು ಮುಳುಗು ಹಾಕಿದ ಸ್ಥಳದಿಂದ ಒಂದು ೨೫ ಹೆಜ್ಜೆ ದೂರದಲ್ಲಿ ಅಯ್ಯಪ್ಪ ಭಕ್ತರ ದಂಡೊಂದು ಸ್ನಾನ ಮಾಡುತ್ತಿತ್ತು. ಅವರು ಇನ್ನೂ ಅಲ್ಲೇ ಇದ್ದರು. ಅದೇ ಅಂದಾಜಿನಲ್ಲಿ ಮುಂದುವರಿದು ಮೊದಲು ಮುಳುಗಿದ ದೂರವನ್ನು ಕ್ರಮಿಸಿ ಮೆಲ್ಲನೆ ಹೆಜ್ಜೆಯಿಡುತ್ತಾ ಹುಡುಕಲು ಪ್ರಾರಂಭಿಸಿದೆವು. ಆಶ್ಚರ್ಯ ಎಂಬಂತೆ ನಾನಿಟ್ಟ ಮೊದಲ ಹೆಜ್ಜೆಯೇ ಪರ್ಸಿನ ಮೇಲೆ. ಮೊದಲು ನಂಬಲಾಗಲಿಲ್ಲ. ಬಗ್ಗಿ ತೆಗೆದರೆ ಅದೇ ಪರ್ಸ್. ಪ್ಲಾಸ್ಟಿಕ್ ಕವರ್ ಇರಲಿಲ್ಲ. ಆದರೆ ಝಿಪ್ ತೆರೆದಿರಲಿಲ್ಲ.

ದಡಕ್ಕೆ ಬಂದು ನೋಡಿದಾಗ ನೋಟುಗಳು ಒದ್ದೆಯಾಗಿದ್ದವಷ್ಟೇ. ಮನಸ್ಸಿನಲ್ಲೇ ದೇವರಿಗೆ ವಂದಿಸಿದೆ. ಇದೊಂದು ಮರೆಯಲಾಗದ ಘಟನೆ. ಪುರೋಹಿತರ ಮಾತು ನಿರ್ಲಕ್ಷಿಸಿ ಆದ ಪ್ರಮಾದ. ನಂತರ ಕ್ರಮ ಪ್ರಕಾರ ಕಾಶಿಗೆ ಒಯ್ಯಲು ಮರಳನ್ನು ವಿಧಿವತ್ತಾಗಿ ಸಂಗ್ರಹಿಸಿದ್ದಾಯ್ತು. ದೇವಾಲಯದೊಳಗೆ ಎಲ್ಲ ತೀರ್ಥಗಳ ಸ್ನಾನ ಮಾಡಿ, ಬಟ್ಟೆ ಬದಲಿಸಿದ ನಮ್ಮನ್ನು ಮತ್ತೆ ದೇವಳಕ್ಕೆ ಕರೆದೊಯ್ದು ದೇವರ ದರ್ಶನ ಮಾಡಿಸಿ, ತಂದ ಕಾಶಿಯ ತೀರ್ಥದಿಂದ ಅಭಿಷೇಕವನ್ನು ಮಾಡಿಸಿದರು ನಮ್ಮ ಪುರೋಹಿತರು.

ದೇವಾಲಯದಲ್ಲಿ ಮುಂಜಾನೆ ಸ್ಫಟಿಕ ಲಿಂಗಕ್ಕೆ ಕ್ಷೀರಾಭಿಷೇಕ ನಡೆಯುತ್ತದೆ. ಅದನ್ನು ಕಾಣಲು ಎರಡು ಕಣ್ಣೂ ಸಾಲದು. ಎರಡೂ ದೇವಸ್ಥಾನಗಳಲ್ಲಿ ತ್ರಿಕಾಲ ಪೂಜೆ, ಆರತಿ, ನೋಡಿ ಧನ್ಯತೆಯನ್ನು ಅನುಭವಿಸಿದೆವು.

ರಾಮನಾಡಿನ ರಾಜ ಭಾಸ್ಕರ ಸೇತುಪತಿ ಸ್ವಾಮಿ ವಿವೇಕಾನಂದರಿಂದ ತುಂಬಾ ಪ್ರಭಾವಿತನಾಗಿದ್ದ. ಅವರನ್ನು ಗುರುವೆಂದು ಸ್ವೀಕರಿಸಿದ್ದ. ಸ್ವಾಮೀಜಿಯವರು ೧೮೯೭ರಲ್ಲಿ ವಿಶ್ವವಿಜೇತರಾಗಿ ಮರಳಿ, ರಾಮೇಶ್ವರದ ಸಮೀಪ ಭರತ ಭೂಮಿಯಲ್ಲಿ ಪದ ಸ್ಪರ್ಶ ಮಾಡಿ, ತಮಗೆ ಸಿಕ್ಕ ಅಭೂತ ಪೂರ್ವ ಸ್ವಾಗತಕ್ಕೆ ಉತ್ತರಿಸಿ ನೀಡಿದ ಸಂದೇಶವನ್ನು, ಇಂಗ್ಲಿಷ್ ಹಾಗೂ ತಮಿಳು ಭಾಷೆಗಳಲ್ಲಿ ಕೆತ್ತಿಸಿರುವ ಶಿಲಾ ಫಲಕಗಳನ್ನು ದೇವಸ್ಥಾನದ ಮುಖ್ಯದ್ವಾರದ ಇಕ್ಕೆಲಗಳಲ್ಲಿ ಹಾಕಿಸಿ, ಗುರು ಭಕ್ತಿ ಮೆರೆದಾತ! ದೇವಸ್ಥಾನ ಪ್ರವೇಶಿಸುತ್ತಿದ್ದಂತೆ ಎಲ್ಲರ ಗಮನ ಸೆಳೆಯುತ್ತದೆ ಇದು !

ಸ್ವಾಮೀಜಿಯವರು ೧೮೮೭ರಲ್ಲಿ ರಾಮನಾಡಿನ ರಾಜನ ಅತಿಥಿಯಾಗಿ ಒಂದು ರಾತ್ರಿ ತಂಗಿದ ಅತಿಥಿ ಗೃಹ ಈಗ ಪವಿತ್ರ ಸ್ಮಾರಕವಾಗಿದೆ. ಇದಕ್ಕೆ ವಿವೇಕಾನಂದ ಭಾಸ್ಕರ ಎಂಬ ಹೆಸರು. ಇದರಲ್ಲಿ ಸ್ವಾಮೀಜಿ ಹಾಗೂ ರಾಜ ಭಾಸ್ಕರ ಸೇತುಪತಿಯ ವಿಗ್ರಹಗಳನ್ನು ಇರಿಸಲಾಗಿದೆ. ಸಣ್ಣದೊಂದು ಪ್ರದರ್ಶಿನಿಯೂ ಇದೆ. ಈ ಸ್ಥಳ ಮುಖ್ಯ ದ್ವಾರದಿಂದ ಎಡಗಡೆ ಸ್ವಲ್ಪ ದೂರದಲ್ಲಿದೆ.

ಸ್ವಾಮೀಜಿಯವರು ಬಂದಿಳಿದ ಸ್ಥಳ ಕುಂತುಕಾಲ್ ಎಂಬಲ್ಲಿ ಸ್ವತಃ ರಾಜನೇ ಸ್ವಾಗತಿಸಲು ಹೋಗಿದ್ದನಂತೆ. ಅಲ್ಲೊಂದು ವಿಜಯ ಸ್ತಂಭ ಸ್ಥಾಪಿಸಿದ್ದರಂತೆ. ಕ್ರಮೇಣ ಅದು ಶಿಥಿಲವಾಗಿ ಹೋಗಿದೆ. ಇವೆಲ್ಲ ದೇವಸ್ಥಾನದಿಂದ ೭-೮ ಕಿ ಮೀ. ದೂರದಲ್ಲಿದೆ. ಈಗ ಅಲ್ಲೊಂದು ಸ್ಮಾರಕ ನಿರ್ಮಾಣವಾಗಿದೆ. ರಾಮಕೃಷ್ಣ ತಪೋವನಂ ಇದನ್ನು ನಿರ್ವಹಿಸುತ್ತಿದೆ. ಸ್ವಾಮಿ ವಿವೇಕಾನಂದ ಮೆಮೋರಿಯಲ್ ಹಾಲ್ ಎಂದು ಇದನ್ನು ಕರೆಯುತ್ತಾರೆ. ಸಮುದ್ರವನ್ನು ಸ್ಪರ್ಶಿಸಿಕೊಂಡೇ ಇದೆ ಎಂಬಂತೆ ಕಾಣುವ ಈ ತಾಣ ತುಂಬಾ ಸುಂದರ. ವಿವೇಕಾನಂದರ ಭವ್ಯ ಮೂರ್ತಿಯೊಂದು ಈ ಸ್ಮಾರಕದಲ್ಲಿದೆ. ಸ್ವಾಮೀಜಿಯವರ ಜೀವನ ಮತ್ತು ಸಂದೇಶಗಳನ್ನು ಸಾರುವ ಪ್ರದರ್ಶನ ಇಲ್ಲಿದೆ.

### ಇತರ ತೀರ್ಥಗಳು ಹಾಗೂ ದೇವಾಲಯಗಳು

**ಧನುಷ್ಕೋಟಿ:** ಶ್ರೀರಾಮನು ಲಂಕೆಗೆ ಸೇತು ಕಟ್ಟಿದ್ದು ಇಲ್ಲಿಂದಲೇ. ಈ ಸ್ಥಳ ರಾಮೇಶ್ವರದಿಂದ ಸುಮಾರು ೧೭ ಕಿ.ಮೀ. ದೂರವಿದೆ. ಅಲ್ಲಿಯವರೆಗೂ ಒಳ್ಳೆಯ ರಸ್ತೆ ಇದೆ. ಮಾರ್ಗದ ಎರಡೂ ಪಕ್ಕಗಳಲ್ಲಿ ಸಮುದ್ರ. ಕೊನೆಗೆ ಮೂರೂ ಕಡೆ ಸಮುದ್ರ. ನೋಡಲು ತುಂಬಾ ರಮಣೀಯ. ಇಲ್ಲಿ ಸ್ನಾನ ಮಾಡಿ ಧನುರ್ಬಾಣಗಳನ್ನು ದಾನ ಮಾಡುವ ಪದ್ಧತಿ ಇದೆಯಂತೆ. ಇಲ್ಲಿಂದ ಲಂಕೆ ೧೮ ಕಿ.ಮೀ. ದೂರ.

**ಕೋದಂಡರಾಮ ದೇವಸ್ಥಾನ:** ಧನುಷ್ಕೋಟಿಗೆ ಹೋಗುವ ಮಾರ್ಗದಲ್ಲೇ ಇದೆ. ಇದು ವಿಭೀಷಣನಿಗೆ ಶ್ರೀರಾಮ ರಾಜ್ಯಾಭಿಷೇಕ ಮಾಡಿದ ಸ್ಥಳ. ಅದೇ ದಾರಿಯಲ್ಲಿ ಜಟಾತೀರ್ಥವಿದೆ. ಶ್ರೀರಾಮನು ಯುದ್ಧದಲ್ಲಿ ಮಲಿನವಾದ ಜಟೆಯನ್ನು ತೊಳೆದ ತೀರ್ಥ. ಇಲ್ಲಿ ಪಿಂಡದಾನ ಮಾಡುವ ಪದ್ಧತಿಯೂ ಇದೆ.

**ರಾಮರ್ ಪಾದಮ್: ಗಂಧಮಾಧನ ಪರ್ವತ:** ಇದೊಂದು ಸಣ್ಣ ಬೆಟ್ಟ. ಇಲ್ಲಿಂದಲೇ ಹನುಮಂತ ಲಂಕೆಗೆ ನೆಗೆದನೆಂದು ನಂಬಿಕೆ. ರಾಮನು ಇಲ್ಲಿಂದ ಲಂಕೆಯನ್ನು ವೀಕ್ಷಿಸಿದನೆಂದೂ ಹೇಳುತ್ತಾರೆ. ಈ ದೇವಾಲಯದಲ್ಲಿ ರಾಮನ ಪದಚಿನ್ಹವಿದೆ.

ಶ್ರೀರಾಮನು **ಉಪ್ಪೂರು** ಎಂಬಲ್ಲಿ ಗಣಪತಿಯನ್ನೂ, ದೇವಿ ಪಟ್ಟಣಂನಲ್ಲಿ ನವಗ್ರಹಗಳನ್ನು ಸ್ಥಾಪಿಸಿ ಪೂಜಿಸಿದ ಸ್ಥಾನಗಳಿವೆ. ದೇವಿಪಟ್ಟಣದಲ್ಲಿ ಸಮುದ್ರದ ನೀರಲ್ಲೇ ಈ ವಿಗ್ರಹಗಳಿವೆ.

**ತಂಗಚಿಮಠ** ಎಂಬಲ್ಲಿ ಸೀತೆಯ ಅಗ್ನಿ ಪರೀಕ್ಷೆ ನಡೆದ ಸ್ಥಳ. ಇಲ್ಲಿ ಸೀತಾಕುಂಡವಿದೆ. ಅಲ್ಲೇ ವಿಲ್ಲುಂಡಿ ತೀರ್ಥ ಎಂಬ ಬಾವಿ ಇದೆ. ಸೀತೆಗೆ ನೀರು ಕುಡಿಯಲು ಶ್ರೀರಾಮ ಸಮುದ್ರದಲ್ಲಿ ಬಾಣ ಹೂಡಿ ಕೊರೆದ ಬಾವಿಯಿದು. ಈ ಬಾವಿಯಲ್ಲಿ ಸಿಹಿನೀರಿದೆ. ಸುತ್ತೆಲ್ಲ ಸಮುದ್ರದ ಉಪ್ಪು ನೀರು.

ರಾಮೇಶ್ವರದಿಂದ ಸುಮಾರು ೬೦ ಕಿ.ಮೀ. ದೂರದಲ್ಲಿ **ತಿರುಪುಲ್ಲಾನಿ** ಎಂಬಲ್ಲಿ ಭವ್ಯವಾದ ದೇವಾಲಯದಲ್ಲಿ ದರ್ಭ ಶಯನ ರಾಮ ಪೂಜೆಗೊಳ್ಳುತ್ತಾನೆ. ಇಲ್ಲಿಯ ಆದಿಜಗನ್ನಾಥ ಸ್ವಾಮಿಯ ಆಲಯ ತುಂಬಾ ಭವ್ಯವಾಗಿದೆ. ತಿರುಪುಲ್ಲಾನಿ ಸಮುದ್ರನನ್ನು ಒಲಿಸಲು ರಾಮ ತಪಸ್ಸುಗೈದ ಸ್ಥಳ. ಇಲ್ಲಿಂದ ಇಪ್ಪತ್ತು ನಿಮಿಷದ ದಾರಿಯಲ್ಲಿ ಉತ್ತರ ಕೋಶ ಮಂಗೈ ಎಂಬಲ್ಲಿ ಬೃಹತ್ ಶಿವ ದೇವಾಲಯವಿದೆ. ಪಾರ್ವತಿಗೆ ಪರಮೇಶ್ವರನು ಪ್ರಣವ ಮಂತ್ರವನ್ನು ಉಪದೇಶಿಸಿದ ಸ್ಥಳವೆಂದು ಪ್ರಸಿದ್ಧಿ. ಇಲ್ಲಿ ೬ ಅಡಿ ಮರಕತದ (ಪಚ್ಚೆ) ನಟರಾಜನ ಮೂರ್ತಿ ಇದೆ. ಈ ಪರಿಸರದಲ್ಲೇ ಕಾಕಭುಶಂಡಿ ಋಷಿಯ ಸಮಾಧಿ ಇದೆ. ೩೦೦೦ ವರ್ಷ ಪುರಾತನ ಕ್ಷೇತ್ರವೃಕ್ಷ ಇಲ್ಲಿಯ ವಿಶೇಷತೆ. ಇಲ್ಲಿಂದ ಸ್ವಲ್ಪ ದೂರದಲ್ಲೇ ಸೇತು ಕರೈ ಎಂಬ ಸ್ಥಳವಿದೆ. ರಾಮಸೇತು ಇಲ್ಲಿಂದಲೇ ಕಟ್ಟಲಾಗಿತ್ತು ಎಂದು ನಂಬಿಕೆ.

ರಾಮೇಶ್ವರಂನ ಅಕ್ಕಪಕ್ಕದಲ್ಲಿ ಲಕ್ಷ್ಮಣತೀರ್ಥ, ಚಕ್ರತೀರ್ಥ, ಪಾಪನಾಶಿನಿ, ರಾಮತೀರ್ಥ, ಭೈರವತೀರ್ಥ ಇತ್ಯಾದಿ ಅನೇಕ ತೀರ್ಥಗಳಿವೆ. ತೇಲುವ ಕಲ್ಲುಗಳನ್ನು ಇಲ್ಲಿ ಕೆಲವೆಡೆ ಕಾಣಬಹುದು.

ರಾಮೇಶ್ವರವನ್ನು ಮುಖ್ಯ ಭೂಭಾಗಕ್ಕೆ ಜೋಡಿಸುವ ಇಂದಿರಾ ಗಾಂಧಿ ಸೇತುವೆಯೂ, ನಡುವೆ ಹಡಗುಗಳಿಗೆ ದಾರಿ ಕೊಡಲು

ವ್ಯವಸ್ಥೆ ಇರುವ ರೈಲು ಮಾರ್ಗವೂ ಪ್ರೇಕ್ಷಣೀಯವೇ. ಇಲ್ಲಿಂದ ಸಮುದ್ರವನ್ನು ನೋಡುವುದೇ ಆನಂದ.

ರಾಮೇಶ್ವರಕ್ಕೆ ಹತ್ತಿರದ ವಿಮಾನ ನಿಲ್ದಾಣ ಮದುರೈ. ದೇಶದ ಹೆಚ್ಚಿನ ಭಾಗಗಳಿಂದ ಇಲ್ಲಿಗೆ ರೈಲು ಸಂಪರ್ಕವಿದೆ. ದಕ್ಷಿಣದ ರಾಜ್ಯಗಳಿಂದ ನೇರ ಬಸ್ ಸೌಲಭ್ಯವೂ ಇದೆ.

ರಾಮೇಶ್ವರದಲ್ಲಿ ಎಲ್ಲ ದರ್ಶನೀಯ ಸ್ಥಳಗಳನ್ನು ಎರಡು ದಿನಗಳಲ್ಲಿ ನೋಡಬಹುದು. ಈ ಯಾತ್ರೆ ಒಂದು ಮರೆಯಲಾಗದ ಅನುಭವವಾಗುವುದರಲ್ಲಿ ಸಂದೇಹವಿಲ್ಲ.

## ದ್ವಾರಕೆ

ಭಗವಾನ್ ಶ್ರೀಕೃಷ್ಣನ ರಾಜಧಾನಿ. ಗೀತಾಚಾರ್ಯ ತನ್ನ ಅಷ್ಟ ಮಹಿಷಿಯರೊಡನೆ ನೆಲೆಸಿದ ಪುಣ್ಯ ನಗರಿ. ಸ್ವರ್ಣ ದ್ವಾರಕೆ ಎಂಬ ಪ್ರಸಿದ್ಧಿಯೊಡನೆ ಇಂದ್ರನ ಅಮರಾವತಿಯನ್ನೂ ಮೀರಿಸಿದ ವೈಭವ! ಭರತ ಭೂಮಿಯ ಸಪ್ತ ಮೋಕ್ಷದಾಯಕ ನಗರಿಗಳಲ್ಲಿ ಒಂದು. ಚತುರ್ಧಾಮಗಳಲ್ಲಿ ಕಿರೀಟಪ್ರಾಯ! ಆಚಾರ್ಯ ಶಂಕರರು ಪಶ್ಚಿಮಾಮ್ನಾಯ ಶಾರದಾ ಪೀಠವನ್ನು ಸ್ಥಾಪಿಸಿ, ತತ್ತ್ವಮಸಿ ಎಂಬ ಮಹಾವಾಕ್ಯ ನೀಡಿ ಹಸ್ತಾಮಲಕಾಚಾರ್ಯರ ಯತಿ ಪರಂಪರೆ ಪ್ರಾರಂಭಿಸಿದ ಧಾಮ. ವೈಷ್ಣವರ ೧೦೮ ದಿವ್ಯದೇಶಗಳಲ್ಲಿ ಒಂದು. ಸಂತ ಮೀರಾಬಾಯಿ ಕೃಷ್ಣನಲ್ಲಿ ಐಕ್ಯಗೊಂಡ ಪಾವನ ಕ್ಷೇತ್ರ. ಶತ ಶತಮಾನಗಳಿಂದ ಸಾಧು-ಸಂತರನ್ನು, ಆಧ್ಯಾತ್ಮಿಕ ಪಿಪಾಸುಗಳನ್ನು,



ದೇಶ-ವಿದೇಶಗಳ ಯಾತ್ರಿಗಳನ್ನು ತನ್ನೆಡೆಗೆ ಕೈಬೀಸಿ ಕರೆಯುತ್ತಿರುವ ಪವಿತ್ರ ತಾಣ! ನಾವೆಲ್ಲರೂ ಭಕ್ತಿಯಿಂದ, ಪ್ರೀತಿಯಿಂದ, ಶ್ರದ್ಧೆಯಿಂದ ಆರಾಧಿಸುವ ಶ್ರೀಕೃಷ್ಣ ನೆಲೆನಿಂತ ಪುಣ್ಯತೀರ್ಥ!

ಈ ಪೌರಾಣಿಕ ನಗರವನ್ನು ಸ್ವತಃ ಶ್ರೀಕೃಷ್ಣ ಪರಮಾತ್ಮನೇ ಸ್ಥಾಪಿಸಿ ತನ್ನ ರಾಜಧಾನಿಯಾಗಿಸಿದ; ಪದೇ ಪದೇ ಕಿರುಕುಳ ನೀಡುತ್ತಿದ್ದ ಜರಾಸಂಧನೊಡನೆ ಹದಿನೇಳು ಬಾರಿ ಯುದ್ಧ ಮಾಡಿದ ನಂತರ, ತನ್ನ ಸಮಸ್ತ ಪ್ರಜೆಗಳ ಸಹಿತ ಇಲ್ಲಿಗೆ ಬಂದು ನೆಲೆಸಿದನೆಂದು ಐತಿಹ್ಯ! ಹೀಗಾಗಿಯೇ ಅವನಿಗೆ ರಣ್-ಚೋಡ್ ಜಿ (ಯುದ್ಧಭೂಮಿಯಿಂದ ಓಡಿದವನು) ಎಂದು ಹೆಸರು. ಇದರ ವ್ಯಾಪ್ತಿ ೯೬ ಚ.ಕಿ.ಮೀ. ಈ ಭೂಮಿಯನ್ನು ಸಮುದ್ರನಿಂದ ಪಡೆದನೆಂದು ನಂಬಿಕೆ.

ಈಗ ಅಸ್ತಿತ್ವದಲ್ಲಿರುವ ದ್ವಾರಕೆ ಏಳನೆಯದಂತೆ. ಈ ಹಿಂದೆ ಆರು ದ್ವಾರಕೆಗಳು ಸಮುದ್ರದ ಪಾಲಾಗಿವೆ. ಕೃಷ್ಣನ ಕಾಲದ ದ್ವಾರಕೆ ಕೃಷ್ಣನ ಅವತಾರ ಸಮಾಪ್ತಿಯೊಂದಿಗೆ ಸಮುದ್ರ ಪಾಲಾಯಿತೆಂದು ಪುರಾಣದಲ್ಲಿ ತಿಳಿಸಿದರೆ, ನಂಬದ ಬುದ್ಧಿವಂತರಿದ್ದಾರೆ. ಅವರಿಗೆ ರಾಮಾಯಣ-ಮಹಾಭಾರತ ಎಲ್ಲ ಕಟ್ಟು ಕತೆ. ರಾಮ ಕೃಷ್ಣರು ಕಾಲ್ಪನಿಕ. ಆದರೆ ಪುರಾತತ್ವ ಇಲಾಖೆಯ ಅಧಿಕೃತ ಶೋಧನೆಗಳಲ್ಲಿ ಭವ್ಯದ್ವಾರಕೆಯ ಪುರಾತನ ಪುರಾವೆಗಳು ಸಮುದ್ರದಲ್ಲಿ ಸಿಕ್ಕಿರುವುದು ಪೌರಾಣಿಕ ನಂಬಿಕೆಗಳು ಸತ್ಯವೆಂದು ಸಾಬೀತು ಮಾಡಿವೆ.

ಈಗಿನ ದ್ವಾರಕೆ ದೇಶದ ಪಶ್ಚಿಮ ಗಡಿಯಲ್ಲಿ ಗುಜರಾತ್ ರಾಜ್ಯದ ಜಾಮ್‌ನಗರ್ ಜಿಲ್ಲೆಯಲ್ಲಿ , ಸಿಂಧೂ ಸಾಗರದ ತೀರದಲ್ಲಿದೆ. ಇದಕ್ಕೆ ದ್ವಾರಾವತಿ, ಕುಶಸ್ಥಲೀ ಎಂಬ ಹೆಸರೂ ಇವೆ.

**ದೇವಾಲಯ:** ಜಗತ್ಪ್ರಸಿದ್ಧವಾದ 'ಜಗತ್-ಮಂದಿರ ' ಎಂಬ ಭವ್ಯ ದೇವಾಲಯವೇ ಇಲ್ಲಿ ಶ್ರೀಕೃಷ್ಣನು 'ತ್ರಿವಿಕ್ರಮ ಕೃಷ್ಣ' ನೆಂಬ ನಾಮಧೇಯದಿಂದ ನೆಲೆಸಿರುವ ಸ್ಥಾನ. ಈ ಮಂದಿರವನ್ನು ಶ್ರೀಕೃಷ್ಣನ ಮರಿಮಗ ವಜ್ರನಾಭ ಸ್ಥಾಪಿಸಿದನೆಂದು ನಂಬಿಕೆ.

ಅಂದರೆ ಇದು ೫೦೦೦ ವರ್ಷಗಳಷ್ಟು ಪ್ರಾಚೀನ. ಕಾಲ ಕಾಲಕ್ಕೆ ಶಿಥಿಲಗೊಂಡ ದೇವಾಲಯವು ಪುನಃ ಪುನಃ ನವೀಕರಣಗೊಳ್ಳುತ್ತಿದ್ದು ಈಗಿರುವ ಆಲಯವು ಕ್ರಿ .ಶ. ೧೭೩೦ರ ಸುಮಾರಿಗೆ ನವೀಕರಿಸಲ್ಪಟ್ಟಿದೆ.

ಈಗಿನ ದೇವಾಲಯವನ್ನು 'ಜಗತ್‌ಮಂದಿರ', 'ನಿಜಮಂದಿರ' 'ತ್ರೈಲೋಕ ಸುಂದರ' 'ದ್ವಾರಕಾಧೀಶ ಮಂದಿರ' ಮುಂತಾಗಿ ಕರೆಯುತ್ತಾರೆ. ಇದೊಂದು ಭವ್ಯ, ಕಲಾತ್ಮಕ, ರಾಜಗಾಂಭೀರ್ಯದಿಂದ ಮೆರೆಯುವ ಭವನ. ಇದರ ಉನ್ನತವಾದ ಶಿಖರ ೭೮ ಮೀಟರ್ ಎತ್ತರ. ಇಲ್ಲಿಂದ ಹಾರುವ ಧ್ವಜ ಮೈಲುಗಟ್ಟಲೆ ದೂರದಿಂದಲೇ ಕಾಣುತ್ತದೆ. ಐದು ಮಹಡಿಗಳ ಈ ಸಂಕೀರ್ಣವು ಚಾಲುಕ್ಯ ಹಾಗೂ ನಾಗರ ಶೈಲಿಯಲ್ಲಿ ನಿರ್ಮಿತವಾಗಿದೆ. ಸುಂದರವಾದ ಇದರ ಗೋಪುರಗಳು ಆಕರ್ಷಕ ವಿನ್ಯಾಸಗಳನ್ನು ಹೊಂದಿವೆ. ಪಶ್ಚಿಮಾಭಿಮುಖವಾದ ಈ ದೇವಾಲಯ ಉತ್ತರ ದಕ್ಷಿಣ ೨೯ ಮೀಟರ್ ಉದ್ದ ಹಾಗೂ ೨೩ ಮೀಟರ್ ಅಗಲ ಹಾಗೂ ಪೂರ್ವ ಪಶ್ಚಿಮವಾಗಿ ೨೭ ಮೀ. ಉದ್ದ ಮತ್ತು ೨೧ ಮೀ. ಅಗಲವಿದೆ. ಈ ವಿಸ್ತಾರವಾದ ಕಟ್ಟಡವು, ಗರ್ಭಗೃಹ, ಮಂಟಪ,ಅಂತರಾಳ,ಮತ್ತು ಪ್ರದಕ್ಷಿಣ ಪಥ ಎಂದು ನಾಲ್ಕು ಭಾಗಗಳನ್ನು ಹೊಂದಿದೆ. ಮುಖಮಂಟಪದಲ್ಲಿ , ಸೂಕ್ಷ್ಮ ಹಾಗೂ ಆಕರ್ಷಕ ಶಿಲ್ಪಗಳುಳ್ಳ ೭೨ ಬಲವಾದ ಭಾರಿ ಶಿಲಾಸ್ತಂಭಗಳಿವೆ. ದೇವಾಲಯದ ಗೋಡೆಗಳಲ್ಲಿ ಅತಿ ಸುಂದರ ಕಲಾಕೃತಿಗಳನ್ನು ಕೆತ್ತಲಾಗಿದೆ.

ಮುಖ್ಯ ಗರ್ಭಗುಡಿಯಲ್ಲಿ ದ್ವಾರಕಾಧೀಶನ ಕೃಷ್ಣ ಶಿಲೆಯ ಚತುರ್ಭುಜ ವಿಗ್ರಹವಿದೆ. ಇದು ಅತಿ ಸುಂದರ! ಮನಮೋಹಕ! ಯಾರನ್ನಾದರೂ ಮೋಡಿ ಮಾಡುವ ಸೌಂದರ್ಯ ಮೂರ್ತಿ! ಎಡಭಾಗದ ಗುಡಿಯಲ್ಲಿ ಬಲರಾಮ, ಬಲಭಾಗದಲ್ಲಿ ಪ್ರದ್ಯುಮ್ನ ಮತ್ತು ಅನಿರುದ್ಧರ ಪ್ರತಿಮೆಗಳಿವೆ. ಆವರಣದಲ್ಲೇ ಇರುವ ಉಪ

ಮಂದಿರಗಳಲ್ಲಿ ರಾಧೆ, ಜಾಂಬವತಿ, ಸತ್ಯಭಾಮೆ, ಲಕ್ಷ್ಮೀ, ರಾಧಾ ಕೃಷ್ಣ ಹಾಗೂ ದೇವಕಿಯರು ಪೂಜೆಗೊಳ್ಳುತ್ತಾರೆ.

ದೇವಾಲಯಕ್ಕೆ ಎರಡು ಪ್ರವೇಶದ್ವಾರಗಳು. ರಾಜಮಾರ್ಗದ ಮುಂದಿನ ಸ್ವರ್ಗದ್ವಾರ ಹಾಗೂ ಗೋಮತಿ ಘಾಟ್ ಕಡೆಯ ಮೋಕ್ಷದ್ವಾರ. ಮೋಕ್ಷದ್ವಾರವನ್ನು ೫೬ ಮೆಟ್ಟಲುಗಳನ್ನೇರಿ ಪ್ರವೇಶಿಸಬೇಕು. ಈ ದ್ವಾರದಿಂದ ಪ್ರವೇಶ ಮೋಕ್ಷಪ್ರದವೆಂದು ಭಾವನೆ.

**ಧ್ವಜ:** ಪ್ರತಿದಿನವೂ ಐದು ಬಾರಿ ಗೋಪುರದ ಮೇಲೆ ಧ್ವಜವನ್ನು ಹಾರಿಸುತ್ತಾರೆ. ಧ್ವಜವು ಗಾತ್ರದಲ್ಲಿ ತುಂಬಾ ದೊಡ್ಡದು. ೫೨ ಗಜ ಬಟ್ಟೆಯದು. ರಂಗುರಂಗಿನ ಈ ಧ್ವಜವನ್ನು ಅನೇಕ ಮೈಲುಗಳ ದೂರದಿಂದಲೇ ನೋಡಬಹುದು. ಇದರಲ್ಲಿರುವ ಸೂರ್ಯ, ಚಂದ್ರರ ಬಿಂಬ, ದೇವಾಲಯವು ಆಚಂದ್ರಾರ್ಕವಾಗಿ ಅಸ್ತಿತ್ವದಲ್ಲಿ ಇರಲಿದೆ ಎಂಬುದರ ಸೂಚನೆ ನೀಡುತ್ತದೆ. ಈ ಧ್ವಜಾರೋಹಣ ಒಂದು ರೋಮಾಂಚಕಾರಿ ನೋಟ. ೭೮ ಮೀಟರ್ ಎತ್ತರದಲ್ಲಿ ಹಳೆಯ ಧ್ವಜವನ್ನು ತೆಗೆದು, ಹೊಸ ಧ್ವಜವನ್ನು ಹಾರಿಸುವ ಕೆಲಸ ಕೇವಲ ಗಟ್ಟಿ ಎದೆಯವರಿಗೆ ಮಾತ್ರ ಸಾಧ್ಯ! ನುರಿತ ಸಿಬ್ಬಂದಿ ಮಾತ್ರ ಇದನ್ನು ಮಾಡಬಲ್ಲರು.

ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊತ್ತ ಭಕ್ತರು ಧ್ವಜವನ್ನು ಒಪ್ಪಿಸುವ ವಾಡಿಕೆಯಿದೆ. ಈ ಹರಕೆ ಒಪ್ಪಿಸಲು ವರ್ಷಗಟ್ಟಲೆ ಮೊದಲೇ ಕಾಯ್ದಿರಿಸಬೇಕಾದರೆ, ಈ ಹರಕೆ ಎಷ್ಟು ಜನಪ್ರಿಯ ಎಂದು ತಿಳಿಯಬಹುದು. ಈ ಹರಕೆ ಒಪ್ಪಿಸುವ ಕಾರ್ಯಕ್ರಮ ಬಹಳ ಸ್ವಾರಸ್ಯಕರ ಮತ್ತು ರೋಚಕ. ಹರಕೆ ಒಪ್ಪಿಸುವ ಭಕ್ತರ ಮನೆಯವರು, ಬಂಧು ಬಾಂಧವರು, ಊರವರು ಗುಂಪಾಗಿ ಇದರಲ್ಲಿ ಭಾಗಿಯಾಗುತ್ತಾರೆ. ಧ್ವಜವನ್ನು ವಸ್ತ್ರ ಮತ್ತು ಹೂಗಳಿಂದ ಸಿಂಗರಿಸಿದ ಬುಟ್ಟಿಯಲ್ಲಿರಿಸುತ್ತಾರೆ. ಹೂಮಾಲೆ ಧರಿಸಿದ ಹಿರಿಯರೊಬ್ಬರು ಅದನ್ನು ಭಕ್ತಿಯಿಂದ ತಲೆಯಮೇಲಿಟ್ಟುಕೊಂಡು ದೇವಾಲಯದ ಪರಿಕ್ರಮ ಮಾಡುತ್ತಾರೆ. ಉಳಿದವರೆಲ್ಲ ಅವರೊಂದಿಗೆ ಕುಣಿಯುತ್ತ, ಜೋರಾಗಿ ಭಜನೆ ಹಾಡುತ್ತ, ಜೈಕಾರ ಹಾಕುತ್ತ ನಡೆಯುತ್ತಾರೆ. ಕುಟುಂಬದ ಸಣ್ಣ ಮಕ್ಕಳೂ ತಾಳ ಹಾಕುತ್ತ, ಕುಣಿಯುತ್ತ ಜೊತೆ ಕೊಡುತ್ತಾರೆ. ಅವರ ಮುಗ್ಧ ಭಕ್ತಿಗೆ ಭಗವಂತ ಒಲಿಯುತ್ತಾನೋ ಇಲ್ಲವೋ ತಿಳಿಯದು. ಆದರೆ ನೋಡುಗರಲ್ಲಿ ತಾವೂ ಅವರೊಡನೆ ಕುಣಿಯಬೇಕೆನ್ನಿಸುವುದು ಮಾತ್ರ ಸತ್ಯ. ಇದು ಆ ಭಕ್ತಿಯ ಶಕ್ತಿ. ಈ ಸಂದರ್ಭವನ್ನು ನೆನೆದರೂ ರೋಮಾಂಚನ! ಪರಿಕ್ರಮ ಮುಗಿದಮೇಲೆ ಅವರಲ್ಲಿ ಕೆಲವರನ್ನು ದೇವಳದ ಉಪ್ಪರಿಗೆಗೆ ಬಿಡಲಾಗುತ್ತದೆ. ನಿಯೋಜಿತ ಸಿಬ್ಬಂದಿ ಧ್ವಜವನ್ನು ಪಡೆದು ಹಾರಿಸುತ್ತಾರೆ. ಹೀಗೆ ದಿನಕ್ಕೆ ಐದು ಸಲ ಈ ಕಾರ್ಯಕ್ರಮ ಜರಗುತ್ತದೆ. ಇದೊಂದು ಅವಶ್ಯವಾಗಿ ವೀಕ್ಷಿಸಬೇಕಾದ ದೃಶ್ಯ.

**ದರ್ಶನ:** ಕೃಷ್ಣನನ್ನು ಆಕರ್ಷಕ ವೇಷಭೂಷಣಗಳಿಂದಲೂ, ದಿವ್ಯಾಭರಣಗಳಿಂದಲೂ, ರಾಜನಂತೆ ಶೃಂಗರಿಸುತ್ತಾರೆ. ದಿನದಲ್ಲಿ ೯ ಬಾರಿ ಕೃಷ್ಣನ ವಿವಿಧ ಸೇವೆಗಳು ನಡೆಯುತ್ತವೆ. ಅದಕ್ಕೆ ಸರಿಯಾಗಿ ವೇಷ ಭೂಷಣಗಳೂ ಬದಲಾಗುತ್ತವೆ

ದೇವಾಲಯವು ಮುಂಜಾನೆ ೬.೩೦ ಯಿಂದ ರಾತ್ರಿ ೯.೩೦ ರ ವರೆಗೂ ತೆರೆದಿರುತ್ತದೆ. ಮಧ್ಯಾಹ್ನ ೧೧ರಿಂದ ೫ರವರೆಗೆ ದ್ವಾರಗಳನ್ನು ಮುಚ್ಚಲಾಗುತ್ತದೆ.

ನಾವು ದ್ವಾರಕಾ ದರ್ಶನಕ್ಕೆ ಬಂದಾಗ ಇಲ್ಲಿಯ ಮಧ್ವ ಮಠದಲ್ಲಿ ಉಳಿದುಕೊಂಡಿದ್ದೆವು. ಉಡುಪಿಯ ಮಠವಾದ್ದರಿಂದ ನಮಗೆ ನಮ್ಮ ಕಡೆಯ ಊಟೋಪಚಾರ. ಮಠ ಹತ್ತಿರವೇ ಇದ್ದುದರಿಂದ ಸಮಯ ಸಿಕ್ಕಾಗಲೆಲ್ಲ ದೇವರ ದರ್ಶನ ಮಾಡುತ್ತಿದ್ದೆವು.

ಇಲ್ಲಿಯ ಅಲಂಕಾರ ತುಂಬಾ ಕುತೂಹಲಕರ. ಒಂದೊಂದೇ ವಸ್ತ್ರಾಭರಣಗಳನ್ನು ನಿಧಾನವಾಗಿ ತೊಡಿಸಿ ಶೃಂಗಾರ ಪೂರ್ಣವಾದ ಮೇಲೆ ಕನ್ನಡಿಯಲ್ಲಿ ತೋರಿಸುತ್ತಾರೆ. ನಂತರ ಆರತಿ.

ಕಿಕ್ಕಿರಿದ ಭಕ್ತರ ಜಯ ಜಯಕಾರ ! ಗಂಟೆ, ಶಂಖಗಳ ನಿನಾದ. ಅರ್ಚಕರ ಮಂತ್ರ ಘೋಷ. ಎದುರಿಗೆ ಸಾಕ್ಷಾತ್ ಕೃಷ್ಣ ಪರಮಾತ್ಮ ! ಭಾವತುಂಬಿದ ಹೃದಯ. ಕಣ್ಣಲ್ಲಿ ಧನ್ಯತೆಯ ಅಶ್ರುಧಾರೆ! ತುಂಬಾ ದೀರ್ಘವಾಗಿ ನಡೆಯುವ ಆರತಿ ನಮ್ಮನ್ನು ಬೇರೆಯೇ ಲೋಕಕ್ಕೆ ಸೆಳೆದೊಯ್ಯುತ್ತದೆ. ಇದೇ ಕಾರಣಕ್ಕೆ ನಮ್ಮ ಚಿತ್ತ, ಮತ್ತೆ ಮತ್ತೆ ದ್ವಾರಕೆಯತ್ತ!

ಇಲ್ಲಿಯ ಅರ್ಚಕರ ವಿಶಿಷ್ಟ ವಿನ್ಯಾಸದ ರಂಗು ರಂಗಿನ ಉಡುಗೆ ನೋಡಬೇಕಾದ್ದು. ಅಂತೆಯೇ ಇಲ್ಲಿನ ಸ್ಥಾನೀಯ ಪುರುಷರ ಅಂಗಿಗಳೂ! ಬಹುಶಃ ಇಲ್ಲಿನ ಹವಾಮಾನಕ್ಕೆ ತಕ್ಕುದಾಗಿರಬಹುದು. ಇಲ್ಲಿ ಗೋವುಗಳಿಗೆ ಮೇವು ಹಾಕುವುದು ಒಂದು ಸೇವೆಯಾಗಿ ಪರಿಗಣಿಸಲಾಗಿದೆ. ಮೇವು ಹಾಗೂ ಗೋವು ಎರಡನ್ನೂ ಇಟ್ಟುಕೊಂಡ ಮಹಿಳೆಯರು ನಮ್ಮಿಂದ ಸೇವೆ ಎಂದು ನಮಗೆ ಮೇವು ಮಾರಿ, ಅದನ್ನೇ ತಮ್ಮ ಗೋವುಗಳಿಗೇ ತಿನ್ನಿಸಿ ನಮಗೆ ಪುಣ್ಯ ಕೊಡಿಸುತ್ತಾರೆ! ಇಲ್ಲಿಯ ಗೋವುಗಳು ನೋಡಲು ಎತ್ತರವಾಗಿಯೂ, ದಷ್ಟಪುಷ್ಟವಾಗಿಯೂ ಇರುತ್ತವೆ. ಅವುಗಳ ಉದ್ದನೆಯ ಕೋಡುಗಳು ಚಕ್ರಾಕಾರವಾಗಿ ಚಾಚಿರುತ್ತವೆ. ನೋಡಲು ಬಲು ಚಂದ.

**ಸುಧಾಮ ಸೇತು:** ಗೋಮತಿ ನದಿಯ ಎರಡು ತಟಗಳನ್ನು ಸಂಪರ್ಕಿಸಲು ಮಾಡಿರುವ ಈ ತೂಗುಸೇತುವೆಯಲ್ಲಿ ಚಲಿಸುವುದೇ ಒಂದು ಅಪೂರ್ವ ಅನುಭವ. ಇಲ್ಲಿಂದ ಇಡೀ ದ್ವಾರಕೆಯ ಒಂದು ಪಾರ್ಶ್ವವನ್ನು ಕಾಣಬಹುದು. ದ್ವಾರಕಾಧೀಶ ಮಂದಿರದ ಫೋಟೋ ತೆಗೆಯಲು ಇದು ಸೂಕ್ತ ಜಾಗ. ಕಡಲ ತಡಿಯ ರಮಣೀಯ ಸೌಂದರ್ಯವನ್ನು ಆಸ್ವಾದಿಸುತ್ತ ಇಲ್ಲಿ ಎಷ್ಟು ಸಮಯವಾದರೂ ಕಳೆಯಬಹುದು. ಇಲ್ಲಿಂದ ಸ್ವಲ್ಪ ದೂರದಲ್ಲೇ ಪಂಚ ಪಾಂಡವರ ಕುಂಡಗಳಿವೆ. ಈ ಕುಂಡಗಳಲ್ಲಿ ಮಾತ್ರ ಸಿಹಿ ನೀರು. ಬೇರೆಡೆ ಸಮುದ್ರದ ಉಪ್ಪುನೀರು! ಇಲ್ಲಿಯೇ ಲಕ್ಷ್ಮೀನಾರಾಯಣರಿಗೆ ಸಮರ್ಪಿತ ದೇಗುಲವಿದೆ.

**ಗೋಮತಿ ಘಾಟ್:** ಗೋಮತಿ ನದಿ ಸಮುದ್ರ ಸೇರುವಲ್ಲಿ ಗೋಮತಿ ಘಾಟ್ ಇದೆ. ಸೂರ್ಯಾಸ್ತ, ಸೂರ್ಯೋದಯ ವೀಕ್ಷ

ಣೆಗೆ ಹೇಳಿ ಮಾಡಿದ ಜಾಗ! ಇಲ್ಲಿ ಸಂಗಮ ಸ್ನಾನ ಮಾಡಿ ದ್ವಾರಕಾಧೀಶನ ದರ್ಶನ ಪಡೆಯುವುದು ವಾಡಿಕೆ.

**ಸಮುದ್ರ ನಾರಾಯಣ ಮಂದಿರ:** ಇದು ಗೋಮತಿ ಸಂಗಮದಲ್ಲಿರುವ ಗೋಮತಿ ದೇವಿಗೆ ಸಮರ್ಪಿತ ದೇವಾಲಯ. ಇಲ್ಲಿ ವರುಣ, ಮೀರಾಬಾಯಿ, ಮತ್ತು ಅಷ್ಟ ಭವಾನಿ ಸನ್ನಿಧಿಗಳೂ ಇವೆ. ಇದೊಂದು ಜನಪ್ರಿಯ ಪೂಜಾ ಸ್ಥಳ.

**ಭಡ್ಕೇಶ್ವರ ಮಹಾದೇವ್ :** ಸಮುದ್ರಕ್ಕೆ ಚಾಚಿಕೊಂಡಿರುವ ಪ್ರದೇಶದಲ್ಲಿರುವ ಈ ದೇವಸ್ಥಾನ ಅಪ್ರತಿಮ ಪ್ರಕೃತಿ ಸೌಂದರ್ಯದ ತಾಣ. ಸುತ್ತ ನೀಲಿ ಸಮುದ್ರ. ದೇವಸ್ಥಾನದವರೆಗೂ ಬರುವ ಅಲೆಗಳು. ತುಂಬಾ ಸುಂದರ ದೃಶ್ಯ! ಒಳಗೆ ಒಂದು ಶಿವಲಿಂಗ. ಧ್ಯಾನಕ್ಕೆ ಸೂಕ್ತ ಸ್ಥಳ. ಭರತದ ವೇಳೆ ಕಡಲಿನ ನೀರು ಏರಿಕೆಯಾಗಿ ಇಲ್ಲಿಯ ದಾರಿ ಮುಳುಗುವುದರಿಂದ ಇತರ ಸಮಯದಲ್ಲಿ ಮಾತ್ರ ದರ್ಶನ ಸಾಧ್ಯ.

**ಗೋಪಿ ತಾಲಾವ್ :** ಕೃಷ್ಣ ಹಾಗೂ ಗೋಪಿಯರು ರಾಸಲೀಲೆ ಆಡಿದ ಸರೋವರವಿದೆಂದು ದಂತಕಥೆ. ಕೃಷ್ಣನು ಅಂತರ್ಧಾನನಾದ ನಂತರ ಅವರೆಲ್ಲ ಈ ಸರೋವರದಲ್ಲಿ ಐಕ್ಯವಾದರಂತೆ. ಇದರಲ್ಲಿ ಸಿಗುವ ಮಣ್ಣೇ ಗೋಪೀಚಂದನ. ಭಕ್ತಿಯಿಂದ ಇದನ್ನು ಉಪಯೋಗಿಸುತ್ತಾರೆ.

**ಭೇಟ್ ದ್ವಾರಕಾ:** ಇದು ಶ್ರೀಕೃಷ್ಣ ನ ಅರಮನೆ. ಇಲ್ಲಿ ರುಕ್ಮಿಣಿ, ಸತ್ಯಭಾಮ, ಜಾಂಬವತಿಯರಲ್ಲದೆ, ವಸುದೇವ-ದೇವಕಿ, ಬಲರಾಮ-ರೇವತಿ, ಮತ್ತು ಸುಭದ್ರೆಯರ ಮಂದಿರಗಳಿವೆ. ಇಲ್ಲಿಯೂ ಭಗವಾನ್ ಶ್ರೀಕೃಷ್ಣನ, ದ್ವಾರಕೆಯಲ್ಲಿರುವಂತಹದೇ ಸುಂದರ ಮೂರ್ತಿ ಇದೆ.

ಇದೊಂದು ದ್ವೀಪವಾಗಿರುವುದರಿಂದ ಇಲ್ಲಿಗೆ ಸ್ವಲ್ಪದೂರವನ್ನು ನಾವೆಗಳ ಮೂಲಕ ಕ್ರಮಿಸಬೇಕು. ಇದನ್ನು ಶಂಖೋದರವೆಂದೂ ಕರೆಯುತ್ತಾರೆ. ಶಂಖಾಸುರನನ್ನು ವಿಷ್ಣು ಕೊಂದ ಸ್ಥಳವೆಂದು ಪುರಾಣ. ಇಲ್ಲಿ ಪ್ರಾಚೀನ ಇತಿಹಾಸದ ಹಲವು ಕುರುಹುಗಳು ಪತ್ತೆಯಾಗಿವೆ.

**ರುಕ್ಮಿಣೀ ಮಂದಿರ:** ಭೇಟ್ ದ್ವಾರಕಾ ಮಾರ್ಗದಲ್ಲಿ ದೇವಿ ರುಕ್ಮಿಣಿಯ ಅತಿ ಸುಂದರ ಮಂದಿರವಿದೆ. ದ್ವಾರಕೆಯಿಂದ ೨ ಕಿ.ಮೀ. ಅಂತರದಲ್ಲಿ ಇರುವ ಈ ಆಲಯ ಸುಂದರ ವಾಸ್ತು ಶಿಲ್ಪಕ್ಕೆ ಮಾದರಿ. ೧೨ನೆ ಶತಮಾನದ ಈ ಕಟ್ಟಡದ ಇಂಚಿಂಚೂ ಸುಂದರ ಶಿಲ್ಪಾಕೃತಿಗಳಿಂದ ಕಂಗೊಳಿಸುತ್ತಿದೆ. ಗರ್ಭಗುಡಿಯಲ್ಲಿರುವ ರುಕ್ಮಿಣೀ ದೇವಿಯ ಮೋಹಕ ಪ್ರತಿಮೆಯ ಸೌಂದರ್ಯ ಯಾರನ್ನಾದರೂ ಪರವಶಗೊಳಿಸುವಂತದ್ದು. ನೋಡಿದಷ್ಟೂ ಮತ್ತೆ ನೋಡಬೇಕೆನ್ನಿಸುವ ಸುಂದರ ಮೂರ್ತಿ!

ಈ ದೇವಾಲಯದ ಕುರಿತು ದಂತ ಕತೆಯೊಂದು ಹೀಗಿದೆ: ಋಷಿ ದುರ್ವಾಸರು ದ್ವಾರಕೆಗೆ ಬರುವಾಗ ಕೃಷ್ಣ ರುಕ್ಮಿಣಿಯರು ಅವರನ್ನು ರಥದಲ್ಲಿ ಕುಳ್ಳಿರಿಸಿ ತಾವೇ ರಥವನ್ನು ಎಳೆದುಕೊಂಡು ಬರುತ್ತಿರಬೇಕಾದರೆ ರುಕ್ಮಿಣಿ ದಾಹ ತಾಳದೆ ನೀರು ಕುಡಿಯುತ್ತಾಳೆ. ಅತಿಥಿಯಾಗಿ ಬಂದ ತನಗೆ ಮೊದಲು ಸಲ್ಲಿಸದೆ ನೀರು ಕುಡಿದುದು, ರುಕ್ಮಿಣಿ ತನಗೆ ಮಾಡಿದ ಅಪಮಾನವೆಂದು ದುರ್ವಾಸರು ಕೋಪಗೊಳ್ಳುತ್ತಾರೆ. ಅವರ ಅಭ್ಯಾಸದಂತೆ ಕೂಡಲೇ ಶಾಪವನ್ನೂ ಕೊಟ್ಟು ಬಿಡುತ್ತಾರೆ. ಆ ಶಾಪದ ಪರಿಣಾಮವೇ ಆಕೆ ಕೃಷ್ಣನಿಂದ ದೂರ ವಾಸಿಸಬೇಕಾಗಿ ಬಂದುದು. ಹಾಗೆ ಆಕೆಯ ದೇವಸ್ಥಾನ ದ್ವಾರಕೆಯ ಹೊರಗೆ.

**ನಾಗೇಶ್ವರ ಜ್ಯೋತಿರ್ಲಿಂಗ:** ದ್ವಾರಕೆಯಿಂದ ೧೭ ಕಿ.ಮೀ. ದೂರದಲ್ಲಿ ಜ್ಯೋತಿರ್ಲಿಂಗಗಳಲ್ಲಿ ಒಂದಾದ ನಾಗೇಶ್ವರ ಮಂದಿರವಿದೆ. ೮೦ ಅಡಿ ಎತ್ತರದ ಭವ್ಯ ಶಿವನ ಮೂರ್ತಿ ಇಲ್ಲಿಯ ಆಕರ್ಷಣೆ.

**ಪ್ರಭಾಸ ತೀರ್ಥ:** ಈ ಕ್ಷೇತ್ರ ಇರುವುದು ಸೋಮನಾಥದ ವೆರಾವಲ್ ಬಳಿ. ಇದು ಕೃಷ್ಣ ಶರೀರ ತ್ಯಜಿಸಿದ ಜಾಗ.

ದೀಪ ಸ್ತಂಭ, ಸ್ವಾಮಿ ನಾರಾಯಣ ಮಂದಿರ, ಗೀತಾ ಮಂದಿರ, ಇಸ್ಕಾನ್ ಮಂದಿರ ಇವು ಇಲ್ಲಿನ ಇತರ ಪ್ರೇಕ್ಷಣೀಯ ಸ್ಥಾನಗಳು. ದ್ವಾರಕೆಗೆ ಹತ್ತಿರದ ವಿಮಾನ ನಿಲ್ದಾಣ ೧೩೭ ಕಿ.ಮೀ. ದೂರದ ಜಾಮ್‌ನಗರ್. ದೇಶದ ಎಲ್ಲಭಾಗಗಳಿಂದಲೂ ಇಲ್ಲಿಗೆ ರೈಲು ಸಂಪರ್ಕವಿದೆ. ಬೆಂಗಳೂರಿನ ಯಲಹಂಕದ ಮೂಲಕ ಪ್ರತಿ ಸೋಮವಾರ ೧೧.೩೦ ಕ್ಕೆ ವಿವೇಕ್ ಎಕ್ಸ್‌ಪ್ರೆಸ್ ಇದೆ.

## ಬದರೀನಾಥ

ಹಿಮಾಲಯದ ಯಾವುದೇ ಯಾತ್ರೆಯೂ ನಾವು ಎಣಿಸಿದಂತೆ ಪೂರ್ಣಗೊಳ್ಳುವ ಭರವಸೆಯಿಲ್ಲ. ಅಲ್ಲಿನ ಹವಾಮಾನವೇ ಹಾಗೆ. ಹೋಗುವ ಮಾರ್ಗವೂ ಕಠಿಣ. ಯಾವಾಗ ಬೇಕಾದರೂ ಪ್ರಕೃತಿ ಮುನಿಯಬಹುದು. ನಾನು ಮೊದಲ ಬಾರಿಗೆ ಬದರಿಗೆ ಹೊರಟಿದ್ದು ೨೦೦೧ರಲ್ಲಿ. ದೇವಪ್ರಯಾಗದ ಸ್ವಾಮೀಜಿಯೊಬ್ಬರ ಗುಂಪಿನಲ್ಲಿ. ಅದು ನನ್ನ ಮೊತ್ತ ಮೊದಲ ಹಿಮಾಲಯದ ಚಾರ್‌ಧಾಮ್ ಯಾತ್ರೆ. ಯಮನೋತ್ರಿಯಿಂದ ಕ್ರಮವಾಗಿ ಕೇದಾರ, ಗಂಗೋತ್ರಿ, ಗೋಮುಖ, ಬದರಿ ಹಾಗೂ ಸಾಧ್ಯವಾದರೆ ಹೇಮಕುಂಡಕ್ಕೆ ಹೋಗುವ ಯೋಜನೆ. ಆದರೆ ಯಮುನೋತ್ರಿಗೆ ಹೋಗುವಾಗಲೇ ನಮಗೆ ಪ್ರತಿಕೂಲ ಹವಾಮಾನ. ಅಲ್ಲಲ್ಲಿ ಜಿಟಿ ಜಿಟಿ ಮಳೆ. ಹೋಗುವಾಗ ಗುಡ್ಡ ಕುಸಿತ. ವಾಹನವನ್ನು ಕೆಲವೆಡೆ ನಿಲ್ಲಿಸಿ ಕಾಲ್ನಡಿಗೆಯಲ್ಲಿ ಗುಡ್ಡದ ದಾರಿಯಿಂದ ಅಂತೂ ಕೇದಾರದ ವರೆಗಿನ ಯಾತ್ರೆ ಮುಗಿಸಿದೆವು. ಗೋಮುಖಕ್ಕೆ ಹೋದ ತಂಡವೊಂದು ೩ ದಿನವಾದರೂ ಹಿಂದಿರುಗಿಲ್ಲವೆಂದು ತಿಳಿದು ಗೋಮುಖ ಪ್ರಯಾಣವೂ ರದ್ದಾಯಿತು. ಬದರಿಯ ಮಾರ್ಗದಲ್ಲಿ ಮತ್ತೆ ವಿಘ್ನ. ೩ ದಿನದಿಂದ ರಸ್ತೆ ಬಂದ್. ಮೊದಲು ಹೋಗಿದ್ದವರಿಗೆ ಅನ್ನ ನೀರಿಲ್ಲದ ಪರಿಸ್ಥಿತಿ. ನಾವು ಅಲ್ಲಿಂದಲೇ ಹಿಂದಿರುಗಬೇಕಾಯಿತು. ಆ ನಂತರ ನಮ್ಮ ಬದರಿ ಪ್ರವಾಸ ಮಂಗಳೂರಿನ ಒಂದು ಪ್ರವಾಸ ಆಯೋಜಕರ ತಂಡದಲ್ಲಿ ೨೦೦೪ರಲ್ಲಿ. ದೇವರ ದಯದಿಂದ ಆ ಪ್ರವಾಸದಲ್ಲಿ ವಿಘ್ನಗಳಿರಲಿಲ್ಲ.

ಹಿಂದುಗಳಿಗೆ ಅತಿ ಪವಿತ್ರವಾದ ಚತುರ್ಧಾಮಗಳಲ್ಲಿ ಬದರೀನಾಥವು ಪ್ರಮುಖವಾದುದು. ಅತಿ ಪ್ರಾಚೀನವಾದ ಈ ಕ್ಷೇತ್ರದ



ಮಹಿಮೆ ಸ್ಕಂದಾದಿ ಅನೇಕ ಪುರಾಣಗಳಲ್ಲಿ ಕೊಂಡಾಡಲ್ಪಟ್ಟಿದೆ. ಇದು ಬದರಿಕಾಶ್ರಮವೆಂದೇ ಪ್ರಸಿದ್ಧ. ಭಗವಾನ್ ವೇದವ್ಯಾಸರೇ ಮೊದಲಾದ ತಪಸ್ವಿಗಳು ನೆಲೆಸಿದ ಪವಿತ್ರಭೂಮಿ. ಇಲ್ಲಿ ವಿಷ್ಣು ನರ-ನಾರಾಯಣ ರೂಪದಲ್ಲಿ ನೆಲೆಸಿದ್ದಾನೆಂದು ನಂಬಿಕೆ. ಉಳಿದ ಮೂರು ಧಾಮಗಳು ಸಮುದ್ರ ತಟದಲ್ಲಿದ್ದರೆ, ಇದು ಇರುವುದು ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ. ಹಿಮಾಲಯದ ನರ-ನಾರಾಯಣ ಪರ್ವತದ ತಪ್ಪಲಲ್ಲಿ , ಉನ್ನತವಾದ ನೀಲಕಂಠ ಪರ್ವತದ ನೆರಳಲ್ಲಿ ; ಪವಿತ್ರ ಅಲಕನಂದಾ ನದಿಯ ತೀರದಲ್ಲಿ. ಶಂಕರಾಚಾರ್ಯರು ಸ್ಥಾಪಿಸಿದ, 'ಅಯಮಾತ್ಮಾ ಬ್ರಹ್ಮ' ಮಹಾವಾಕ್ಯದೊಡನೆ ಅಥರ್ವವೇದ ರಕ್ಷಣೆಯ ಹೊಣೆ ಹೊತ್ತಿರುವ ಉತ್ತರಾಮ್ನಾಯ ಜ್ಯೋತಿರ್ಮಠ ಇರುವುದೂ ಇಲ್ಲೇ, ೪೫ ಕಿ.ಮೀ. ದೂರದಲ್ಲಿ. ಇದನ್ನು ಜೋಶೀಮಠ ಎಂದು ಸ್ಥಾನೀಯರು ಕರೆಯುತ್ತಾರೆ. ಬದರೀನಾಥನ ಚಳಿಗಾಲದ ನಿವಾಸವೂ ಅಲ್ಲೇ. ಶ್ರೀವೈಷ್ಣವರ ೧೦೮ ದಿವ್ಯದೇಶಗಳಲ್ಲಿ ಇದಕ್ಕೊಂದು ಮುಖ್ಯ ಸ್ಥಾನ. ಪಂಚ ಬದರಿಗಳಲ್ಲಿ ಇದೂ ಒಂದು.

ಬದರಿ ಹಿಮಾಲಯದ ಗಢ್ವಾಲ್ ಪ್ರದೇಶದಲ್ಲಿ , ಸುಮಾರು ಸಮುದ್ರ ಮಟ್ಟದಿಂದ ೩೪೧೫ ಮೀಟರ್ ಎತ್ತರದಲ್ಲಿದೆ. ಋಷೀಕೇಶದಿಂದ ಇಲ್ಲಿಗೆ ೩೦೧ ಕಿ.ಮೀ.ದೂರ. ವರ್ಷದ ೬ ತಿಂಗಳು ವಿಪರೀತ ಚಳಿ ಹಾಗೂ ಹಿಮಪಾತ. ಹಾಗಾಗಿ ೬ ತಿಂಗಳು ಮಾತ್ರ ಇಲ್ಲಿಗೆ ಪ್ರವಾಸಿಗಳಿಗೆ ಪ್ರವೇಶ. ಇಲ್ಲಿಯ ದಾರಿ ಬಹಳ ಕಠಿಣ. ಆದರೆ ದೃಶ್ಯಗಳು ನಯನ ಮನೋಹರ. ಕಡಿದಾದ ಪರ್ವತ ಶ್ರೇಣಿಗಳ ಮಧ್ಯದಲ್ಲಿ ವೇಗವಾಗಿ ವಾಹನ ಸಾಗುವಾಗ ಅಂಜಿಕೆಯೂ ಆಗುತ್ತದೆ. ಪೈನ್ ಮತ್ತು ದೇವದಾರು ಮರಗಳ ಸಾಲುಗಳು, ಹಿಮಾಚ್ಛಾದಿತ ಪರ್ವತ ಶಿಖರಗಳು, ಆಳದಲ್ಲಿ ಹಾವಿನಂತೆ ಹರಿಯುವ ನದಿಗಳು. ಬಣ್ಣ ಬಣ್ಣದ ಪುಷ್ಪರಾಶಿ. ಇವೆಲ್ಲವನ್ನೂ ನೋಡುತ್ತಾ ಹೋದಂತೆ ಬದರೀನಾಥ ಬಂದೇ ಬಿಡುತ್ತದೆ. ಬದ್ರಿ ಧಾಮದ ಆಕರ್ಷಣೆ ಎಷ್ಟೆಂದರೆ, ಪ್ರತಿವರ್ಷವೂ ಯಾತ್ರಿಕರ ಸಂಖ್ಯೆ ಮಿತಿಮೀರುತ್ತಿದೆ. ಈಗ ಇಲ್ಲಿಗೆ ಪ್ರಯಾಣಿಸುವವರು ಮೊದಲೇ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಭಾರತ ಚೈನಾ ಗಡಿ ಭಾಗವಾಗಿರುವುದರಿಂದ ಇಲ್ಲಿ ಗಡಿ ರಕ್ಷಣಾ ಪಡೆಗಳ ನಿಯೋಜನೆ ಇದೆ.

**ಬದರೀನಾಥ ದೇವಸ್ಥಾನ:** ಆದಿ ಶಂಕರರಿಂದ ೮ ನೇ ಶತಮಾನದಲ್ಲಿ ಸ್ಥಾಪಿಸಲಾದ ದೇವಸ್ಥಾನ, ಕಾಲಕಾಲಕ್ಕೆ ವಿಸ್ತರಣೆ, ನವೀಕರಣವಾಗುತ್ತ ಈಗಿನ ಭವ್ಯತೆಯನ್ನು ಪಡೆದಿದೆ. ೫೦ ಅಡಿ ಎತ್ತರದ ಕಟ್ಟಡ. ಮೇಲೆ ಚಿನ್ನದ ಗೋಪುರ. ಗೋಪುರದ ಮೇಲೆ ಕಲಶಗಳು. ದೇವಾಲಯ ಗರ್ಭಗುಡಿ, ದರ್ಶನ ಮಂಟಪ ಮತ್ತು ವಿಶಾಲವಾದ ಸಭಾಮಂಟಪವನ್ನು ಹೊಂದಿದೆ. ಪರಿಕ್ರಮ ಪಥವೂ ಇದೆ. ಶಂಖಾಕೃತಿಯ ಗೋಪುರಕ್ಕೆ ಚಿನ್ನದ ಲೇಪನವಿದೆ.

ಮಹಾವಿಷ್ಣು-ಬದರೀನಾಥನನ್ನು ಇಲ್ಲಿ ಬದರಿ ವಿಶಾಲ್ ಎಂದು ಭಕ್ತಿಯಿಂದ ಸ್ಮರಿಸುತ್ತಾರೆ. ಇಲ್ಲಿ ಪೂಜಿಸಲ್ಪಡುವ ವಿಗ್ರಹ ಒಂದು ಮೊಳದಷ್ಟು ಎತ್ತರದ ಸಾಲಿಗ್ರಾಮ ಶಿಲಾಮೂರ್ತಿ. ಇದು ಸ್ವಯಂಭೂ ಎಂದು ನಂಬಿಕೆ. ಪದ್ಮಾಸನದಲ್ಲಿ ಯೋಗಮುದ್ರೆಯಲ್ಲಿ ಕುಳಿತ ಶಂಖಚಕ್ರಧಾರಿ, ಚತುರ್ಭುಜ ಮೂರ್ತಿ. ತುಂಬಾ ಮೋಹಕ! ಕುಬೇರ, ನಾರದ, ಉದ್ಧವ, ನರ-ನಾರಾಯಣರ ಮೂರ್ತಿಗಳೂ ಗರ್ಭಗುಡಿಯಲ್ಲಿವೆ. ದೇವಾಲಯದ ಆವರಣದಲ್ಲಿ ಲಕ್ಷ್ಮಿ, ನವದುರ್ಗೆಯರು, ಗರುಡ, ಮತ್ತು ಶಂಕರಾಚಾರ್ಯರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದಾರೆ. ಪ್ರವೇಶದ್ವಾರದ ಬಳಿ ಘಂಟಾಕರ್ಣನ ವಿಗ್ರಹವಿದೆ. ಅಲಕನಂದಾ ನದಿಯನ್ನು ದಾಟಿ ಇಲ್ಲಿಗೆ ಬರಬೇಕು. ದಾಟಲು ತೂಗು ಸೇತುವೆಯಿದೆ.

ದೇವಾಲಯ ಮುಂಜಾನೆ ೪.೩೦ ಘಂಟೆಗೆ ತೆರೆಯಲ್ಪಡುತ್ತದೆ. ಬದರೀನಾಥನಿಗೆ ಹಿಂದಿನ ದಿನದ ವಸ್ತ್ರಗಳನ್ನು ತೆಗೆದು ಮಂಗಳ ದ್ರವ್ಯಗಳನ್ನ ಹಚ್ಚಿ , ನಂತರ ಮಾಡಿಸುವ ಬಿಸಿನೀರಿನ ಮಜ್ಜನ ನೋಡಲೇಬೇಕಾದ ದೃಶ್ಯ. ನಂತರ ಪುನಃ ಹೊಸ ಬಟ್ಟೆಗಳನ್ನು ತೊಡಿಸಿ ಶೃಂಗರಿಸುತ್ತಾರೆ. ಇಲ್ಲಿ ಕೇರಳದ ನಂಬೂದಿರಿ ಬ್ರಾಹ್ಮಣರಿಂದ ಅರ್ಚನೆ. ಅವರನ್ನು ರಾವಲ್ ಎಂದು ಕರೆಯುತ್ತಾರೆ. ವಿಶಿಷ್ಟ ಪೋಷಾಕು ಅವರಿಗೆ! ಸ್ಥಾನೀಯ ಡಿಮರಿ ಬ್ರಾಹ್ಮಣರು ಅವರಿಗೆ ಸಹಾಯಕರು. ಪೂಜಾಕಲಾಪಗಳು ದಕ್ಷಿಣಭಾರತೀಯ ಪದ್ಧತಿಯಲ್ಲಿ. ರಾತ್ರಿಯ ಆರತಿಯ ಸಮಯದಲ್ಲಿ ಭಕ್ತರು ಕಿಕ್ಕಿರಿದಿರುತ್ತಾರೆ. 'ಬದರಿ ವಿಶಾಲ್ ಕಿ ಜೈ' ಎಂಬ ಜೈಕಾರಗಳೊಂದಿಗೆ ತುಂಬಾ ಉತ್ಸಾಹಭರಿತರಾಗಿ ಪಾಲ್ಗೊಳ್ಳುತ್ತಾರೆ. ಆರತಿಯ ಸಮಯದಲ್ಲಿ ಒಂದು ಅಲೌಕಿಕ ವಾತಾವರಣ ಸೃಷ್ಟಿಯಾಗಿ, ಅನಿರ್ವಚನೀಯ ಶಾಂತಿಯಿಂದ ಮನಸ್ಸು ಆನಂದಿತವಾಗುತ್ತದೆ. ಧನ್ಯತೆಯ ಅನುಭವವಾಗುತ್ತದೆ. ದೇವಾಲಯದಲ್ಲಿ ಭಕ್ತರು ಸಲ್ಲಿಸಬಹುದಾದ ಅನೇಕ ಸೇವೆಗಳಿವೆ. ನಿರ್ದಿಷ್ಟ ಮೊತ್ತ ತೆತ್ತು ಸೇವೆಗಳಲ್ಲಿ ಭಾಗಿಗಳಾಗಬಹುದು. ರಾತ್ರಿ ೮.೪೦-೯ ಘಂಟೆಯ ಹೊತ್ತಿಗೆ ದ್ವಾರಗಳನ್ನು ಮುಚ್ಚಲಾಗುತ್ತದೆ.

ಚಳಿಗಾಲದಲ್ಲಿ ಹಿಮಪಾತದಿಂದ ಸಂಪೂರ್ಣ ಕ್ಷೇತ್ರ ಹಿಮದಿಂದ ಮುಚ್ಚಿ ಹೋಗುತ್ತದೆ. ಆಗ ದೇವಸ್ಥಾನವನ್ನು ಸಾಮಾನ್ಯವಾಗಿ ಅಕ್ಷಯತದಿಗೆಯವರೆಗೆ ಮುಚ್ಚಲಾಗುತ್ತದೆ. ಆ ಆರು ತಿಂಗಳು ನಾರದ ಮಹರ್ಷಿಗಳು ಪೂಜೆ ಮಾಡುವರೆಂದು ನಂಬಿಕೆ. ಆ ಸಮಯದಲ್ಲಿ ಬದರಿನಾಥನ ಉತ್ಸವಮೂರ್ತಿಯನ್ನು ಜೋಶೀಮಠದಲ್ಲಿ ಪೂಜಿಸಲಾಗುತ್ತದೆ. ಸಾಮಾನ್ಯವಾಗಿ ಅಕ್ಷಯತದಿಗೆಯ ಸಮಯದಲ್ಲಿ ದೇವಾಲಯದ ಕವಾಟಗಳನ್ನು ತೆರೆಯುತ್ತಾರೆ. ಜೋಶೀಮಠದಿಂದ ದೇವಾಲಯಕ್ಕೆ ಬರುವಾಗ ಸಂಭ್ರಮದ ಡೋಲಿ ಮೆರವಣಿಗೆ. ಚಳಿಗಾಲದಲ್ಲಿ ಅಲ್ಲಿಗೆ ಹಿಂತಿರುಗುವಾಗಲೂ ತುಂಬಾ ಉತ್ಸಾಹದಿಂದ ಭಕ್ತರು ಭಾಗವಹಿಸುತ್ತಾರೆ. ಮೇ ತಿಂಗಳಿ

ನಿಂದ ಅಕ್ಟೋಬರ್-ನವಂಬರ್ ವರೆಗೆ ದರ್ಶನವಿದೆ. ನಿರ್ದಿಷ್ಟ ದಿನಗಳನ್ನು ಪ್ರತಿಬಾರಿ ಆಡಳಿತ ಮಂಡಳಿ ನಿರ್ಧರಿಸುತ್ತದೆ.

ದೇವಾಲಯದ ಸುತ್ತಮುತ್ತ ಹಿಮಾಲಯದ ಸುಂದರ ದೃಶ್ಯಗಳು. ಸನಿಹವೇ ಜುಳುಜುಳು ಹರಿಯುವ ಶ್ವೇತ ವರ್ಣದ ಅಲಕನಂದೆ. ನೋಡಲು ತುಂಬಾ ಚೆಂದ. ಆದರೆ ಮುಟ್ಟಿದರೆ ಮರಗಟ್ಟುವಷ್ಟು ತಣ್ಣಗೆ. ಬಾಟಲಿಗೆ ತೀರ್ಥ ತುಂಬಿಸುವಷ್ಟರಲ್ಲೇ ಬೆರಳುಗಳು ಮರಗಟ್ಟಿಬಿಟ್ಟಿದ್ದವು.

ಆಶ್ಚರ್ಯವೆಂದರೆ ಕೆಲವು ವೃದ್ಧರು ಚೊಂಬಿನಿಂದ ಅದೇ ನೀರೆರೆದು ಸ್ನಾನ ಮಾಡುತ್ತಿದ್ದುದು. ಇಲ್ಲಿ ಅಲಕನಂದೆಯಲ್ಲಿ ನೀರಿನ ಪ್ರಮಾಣ ಕಡಿಮೆಯಿದ್ದರೂ ಹರಿಯುವ ರಭಸ ಜೋರಾಗಿತ್ತು. ಹಾಗಾಗಿ ಯಾರೂ ನೀರಲ್ಲಿ ಇಳಿಯುವ ಸಾಹಸ ಮಾಡಿರಲಿಲ್ಲ. ಅಲಕನಂದಾ ನದಿಗೆ ಸಾಯಂ ಸಂಧ್ಯೆಯ ವೇಳೆ ಭಕ್ತರೆಲ್ಲ ಸೇರಿ ಮಾಡುವ ಆರತಿ ಬಹಳ ಚಂದ. ದೇವಾಲಯದ ಬಾಗಿಲಲ್ಲೇ ತಪ್ತಕುಂಡವೆಂಬ ಬಿಸಿನೀರಿನ ಕುಂಡವಿದೆ. ಇದೊಂದು ಪ್ರಕೃತಿಯ ವಿಸ್ಮಯ. ಮಗ್ಗುಲಲ್ಲಿರುವ ನದಿಯ ನೀರು ಕೊರೆಯುವಷ್ಟು ತಣ್ಣಗೆ. ಇಲ್ಲಾದರೋ ಕುದಿಯುವ ಬಿಸಿ ನೀರು. ಇಲ್ಲಿ ಸ್ನಾನ ಬಹಳ ಆಪ್ಯಾಯಮಾನ. ಸ್ತ್ರೀಯರ ಸ್ನಾನಕ್ಕೆ ಇಲ್ಲಿ ಪ್ರತ್ಯೇಕ ವ್ಯವಸ್ಥೆಯಿದೆ. ಎಲ್ಲರೂ ಇಲ್ಲಿ ಸ್ನಾನ ಮಾಡಿ ದೇವರ ದರ್ಶನ ಮಾಡುತ್ತಾರೆ.

### ಇಲ್ಲಿಯ ಇತರ ಮಹತ್ವದ ಸ್ಥಳಗಳು :

**ನಾರದಕುಂಡ:** ಇದರಲ್ಲೇ ಶಂಕರಾಚಾರ್ಯರಿಗೆ ಬದರಿನಾಥನ ವಿಗ್ರಹ ಲಭಿಸಿದ್ದು. ಇದು ದೇವಳದ ಸನಿಹದಲ್ಲೇ ಇದೆ.

**ಬ್ರಹ್ಮ ಕಪಾಲ:** ಅಲಕನಂದಾ ತೀರದಲ್ಲಿದೆ. ಹಿಂದುಗಳಿಗೆ ಬಹಳ ಪವಿತ್ರ ಕ್ಷೇತ್ರ. ಇಲ್ಲಿ ಪಿತೃಗಳಿಗೆ ಶ್ರಾದ್ಧ - ತರ್ಪಣಾದಿಗಳನ್ನು ನೀಡುವ ಸಂಪ್ರದಾಯವಿದೆ.

ಸುತ್ತಮುತ್ತಲ ಒಂದು ಕಿ.ಮೀ. ದೂರದಲ್ಲಿ ಹಿಂದುಗಳಿಗೆ ಪವಿತ್ರವಾದ, ಶ್ರಾದ್ಧ ತರ್ಪಣಾದಿಗಳಿಗೆ ಯೋಗ್ಯವಾದ ಪಂಚ ಶಿಲೆಗಳು ಇವೆ. ಅವು: ಗರುಡ ಶಿಲೆ, ನರಸಿಂಹ ಶಿಲೆ, ಮಾರ್ಕಂಡೇಯ ಶಿಲೆ, ವರಾಹ ಶಿಲೆ ಮತ್ತು ನರ ಶಿಲೆ.

ಅಂತೆಯೇ ಪ್ರಹ್ಲಾದ, ಕೂರ್ಮ, ಭೃಗು, ಊರ್ವಶಿ ಮತ್ತು ಇಂದಿರಾ ಧಾರಾ ಎಂಬ ಐದು ತೊರೆಗಳೂ ಪ್ರಸಿದ್ಧ. ಶೇಷನೇತ್ರ ಎಂಬ ಶಿಲೆಯಲ್ಲಿ ಆದಿಶೇಷನ ನೆಲೆ ಇದೆಯೆಂದು ನಂಬುತ್ತಾರೆ.

**ಮಾನಾ:** ಬದರಿಯಿಂದ ಸುಮಾರು ೩ ಕಿ.ಮೀ. ದೂರದಲ್ಲಿದೆ ಈ ಪುಟ್ಟ ಊರು. ಇದು ಘಟೋತ್ಕಚನ ರಾಜಧಾನಿ. ಗುಪ್ತಗಾಮಿನಿ ಸರಸ್ವತಿ ನದಿ ನೋಡಲು ಸಿಗುವುದು ಇಲ್ಲಿ ಮಾತ್ರ. ಶುದ್ಧ ಸ್ಪಟಿಕ ಸದೃಶ ಜಲ. ಆಗಸವನ್ನು ಪ್ರತಿಫಲಿಸಿ ಕಡು ನೀಲಿ ಬಣ್ಣದಲ್ಲಿ ಹರಿಯುವ ಈ ನದಿ ಒಂದು ಕಿ.ಮೀ. ನಷ್ಟು ಕ್ರಮಿಸಿ ಅಲಕನಂದೆಯಲ್ಲಿ ಒಂದಾಗುತ್ತಾಳೆ. ಮಾನಾ ಒಂದು ಸಣ್ಣ ಗ್ರಾಮ. ಇದು ಭಾರತದ ಕೊಟ್ಟ ಕೊನೆಯ ಊರು. ಇಲ್ಲಿ ಭೀಮ್‌ಪೂಲ್ ಎನ್ನುವ ಸ್ವರ್ಗಾರೋಹಣ ಸಮಯದಲ್ಲಿ ಸರಸ್ವತಿ ನದಿ ದಾಟಲು ಭೀಮಸೇನನು ಇರಿಸಿದ, ಬೃಹದಾಕಾರದ ಬಂಡೆಯನ್ನು ನೋಡಲು


ಮಾನಾ ಗ್ರಾಮ, ಬದರೀನಾಥ

ತುಂಬಾ ಯಾತ್ರಿಗಳು ಬರುತ್ತಾರೆ. ಇಲ್ಲಿ ಸರಸ್ವತಿ ನದಿ ಎತ್ತರದಿಂದ ರಭಸವಾಗಿ ಧುಮುಕುವುದನ್ನು ನೋಡುವುದು ತುಂಬಾ ರೋಚಕ. ನಾವು ಅಲ್ಲಿಗೆ ಹೋದಾಗ ಕೊರೆಯುವ ಚಳಿ. ಬೆಚ್ಚನೆಯ ಉಡುಪುಗಳನ್ನು ಧರಿಸಿದ್ದರೂ ಮೈಯಲ್ಲಿ ನಡುಕ. ಆದರೆ ಅಲ್ಲೇ ಒಂದು ಗುಹೆಯಂತಹ ಜಾಗದಲ್ಲಿ ಮೈಮೇಲೆ ಒಂದು ಚೂರೂ ವಸ್ತ್ರ ಧರಿಸದ ನಾಗಾ ಸಾಧುವೊಬ್ಬ ಆರಾಮವಾಗಿ ಕುಳಿತಿದ್ದ. ಬಹುಶ ಮೈಯೆಲ್ಲ ಬಳಿದ ಭಸ್ಮ ಚಳಿಯಿಂದ ರಕ್ಷಣೆ ನೀಡುತ್ತಿರಬಹುದು.

ಮಾನಾದಿಂದ ಮುಂದೆ ಹಿಮಾಲಯಾದ ಉನ್ನತ ಶಿಖರಗಳ ಪ್ರಾರಂಭ. ಮಹಾಭಾರತದ ಅಂತ್ಯದಲ್ಲಿ ಪಾಂಡವರು ಇದೇ ಮಾರ್ಗವಾಗಿ ಸ್ವರ್ಗಕ್ಕೆ ಹೊರಟರೆಂದೂ, ಧರ್ಮರಾಯನ ಹೊರತು ಯಾರು ಸಶರೀರವಾಗಿ ಹೋಗಲು ಸಫಲರಾಗಲಿಲ್ಲವೆಂದೂ ಕತೆ. ಈ ಪ್ರದೇಶವೇ ಸ್ವರ್ಗಾರೋಹಿಣಿ ಎಂಬುದು.

ಮಾನಾ ಊರಲ್ಲೇ ವ್ಯಾಸ ಗುಹೆ ಮತ್ತು ಗಣೇಶ ಗುಹೆಗಳಿವೆ. ವ್ಯಾಸ ಗುಹೆ ದೂರದಿಂದ ತೆರೆದಿಟ್ಟ ಬೃಹತ್ ಪುಸ್ತಕದಂತೆ ಕಾಣುತ್ತದೆ. ಮಹರ್ಷಿ ವ್ಯಾಸರು ಮಹಾಭಾರತವನ್ನು ಇಲ್ಲಿಯೇ ಗಣಪತಿಯಿಂದ ಬರೆಸಿದರೆಂದು ಪ್ರತೀತಿ. ಇಲ್ಲಿ ವ್ಯಾಸರ, ಗಣಪತಿಯ ಮೂರ್ತಿಗಳಿವೆ.

ಬದರಿಯಲ್ಲಿ ಯಾತ್ರಿಗಳು ಉಳಿದುಕೊಳ್ಳಲು ಕಾಲಿ ಕಂಬ್ಳಿವಾಲಾ ಮುಂತಾದ ಹಲವಾರು ಆಶ್ರಮಗಳಿವೆ. ಕಾಶಿಮಠ, ಉಡುಪಿಯ ಪೇಜಾವರ ಅನಂತ ಮಠಗಳೂ ಇವೆ.

### ಉಪಸಂಹಾರ

ತೀರ್ಥಯಾತ್ರೆ ಬರಿಯ ಪ್ರವಾಸವಲ್ಲ. ಪರಮಾತ್ಮನು ಸ್ವತಃ ಮನುಷ್ಯರೂಪದಿಂದ ಓಡಾಡಿದ ಸ್ಥಳಗಳಲ್ಲಿ, ಮನಸ್ಸು ಭಗವಂತನ ಸಾಮಿಪ್ಯವನ್ನು ಅನುಭವಿಸಬೇಕು. ಕ್ಷೇತ್ರಗಳಲ್ಲಿ ವ್ಯಕ್ತವಾಗುವ ವಿಶೇಷ ಆಧ್ಯಾತ್ಮಿಕ ತರಂಗಗಳು ಸಾಧನೆಗೆ ಸಹಾಯಕವಾಗಬೇಕು. ಮನಸ್ಸನ್ನು ಅಂತರ್ಮುಖಗೊಳಿಸಿ ನಮ್ಮಲ್ಲೇ ಇರುವ ಆ ಅನಂತ ಚೈತನ್ಯವನ್ನು ಕಂಡುಕೊಳ್ಳಲು ದಾರಿ-ದೀಪವಾಗಬೇಕು. ನಿಜವಾದ ಅರ್ಥದಲ್ಲಿ ಯಾತ್ರೆ ಆಗಲೇ ಪ್ರಾರಂಭ ! ಅದೇ ಅಂತರ್ಯಾತ್ರೆ. ತೀರ್ಥಯಾತ್ರೆ ಅಂತರ್ಯಾತ್ರೆಯಲ್ಲಿ ಪರ್ಯವಸಾನವಾದರೆ ಮಾತ್ರ ಸಾರ್ಥಕ. ✽